ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಲಖೌನ್‌ದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದ ಲಖನೌ ಸೂಪರ್ ಜೈಂಟ್ಸ್ ತಂಡದ ಜೋಶ್ ಇಂಗ್ಲಿಸ್

24 ಮೇ, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 74 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಆ ಒಂದು ಶಾಲೆಯ ಹೆಸರು ಮನೆ ಮನಗಳ ಬೆಳಗುವ ದೀಪ » 2

51 ಸಾವಿರ ಯುವಕರಿಗೆ ಉದ್ಯೋಗ ಪತ್ರ ನೀಡಿದ ಮೋದಿ

ಬೆಂಗಳೂರು ಅಂತಾರಾಷ್ಟ್ರೀಯ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ » 4

ಕಂತುಗಳಲ್ಲಿ ಜನರ ದುಡಿಮೆ ಲೂಟಿ

ನಿರಂತರ ತೈಲ ಬೆಲೆ ಏರಿಕೆಗೆ ಖಂಡನೆ | ಕೇಂದ್ರದ ವಿರುದ್ಧ ಎಐಸಿಸಿ ಅಧ್ಯಕ್ಷ ಖರ್ಗೆ ಕಿಡಿ

• ಪ್ರಜೋದಯ ವರದಿ

ನವದೆಹಲಿ: ನಿರಂತರವಾಗಿ ತೈಲ ಬೆಲೆ ಏರಿಕೆಯಾಗುತ್ತಿರುವುದನ್ನು ಖಂಡಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಡಳಿತ ಪಕ್ಷವು ಸಾಮಾನ್ಯ ಜನರ ದುಡಿಮೆಯನ್ನು ಕಂತುಗಳಲ್ಲಿ ಲೂಟಿ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ದರಗಳು ಶನಿವಾರ ಮತ್ತೆ ಲೀಟರ್‌ಗೆ 91 ಪೈಸೆ ಏರಿಕೆಯಾ ಗಿದ್ದು, ಇದು ಕಳೆದ 10 ದಿನಗಳಲ್ಲಿ ನಡೆದಿರುವ ಮೂರನೇ ಹೆಚ್ಚಳವಾಗಿದೆ. ಈ ಹಿಂದೆ ಅಂತಾ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಗಳು ಕುಸಿದಿದ್ದಾಗಲೂ ಅದರ ಆರ್ಥಿಕ ಲಾಭವನ್ನು ಕೇಂದ್ರ ಸರ್ಕಾರ ದೇಶದ ನಾಗರಿಕರಿಗೆ ವರ್ಗಾಯಿಸದೆ ವಂಚಿಸಿದೆ ಎಂದು ದೂರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ವೈಫಲ್ಯವೇ ಈ ಪರಿಸ್ಥಿತಿಗೆ ಕಾರಣ. ಪೆಟ್ರೋಲ್ ಬೆಲೆ ಈಗ ಮತ್ತೆ 100 ರೂ. ಗಡಿ ದಾಟಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಪ್ರತಿದಿನ ಬರೋಬ್ಬರಿ 1,000 ಕೋಟಿ ರೂ. ಕೇಂದ್ರ ತೆರಿಗೆ ವಿಧಿಸುತ್ತಿದ್ದರೂ ಬಿಜೆಪಿಯ ಹಸಿವು ತೀರುತ್ತಿಲ್ಲ. ಜಾಗತಿಕವಾಗಿ ತೈಲ ಬೆಲೆ ಕಡಿಮೆ ಇದ್ದಾಗ ಜನರಿಗೆ ರಿಯಾಯಿತಿ ನೀಡಲಿಲ್ಲ, ಬದಲಿಗೆ ನಿರಂತರವಾಗಿ ಸುಲಿಗೆ ಮಾಡಿದರು. ಬಿಕ್ಕಟ್ಟು ಎದುರಾದಾಗ ಚುನಾವಣೆಗಳತ್ತ ಗಮನ ಹರಿಸಿ ಮುಗಿದ ಮೇಲೆ ಜನರಿಗೆ ತ್ಯಾಗದ ಪಾಠ ಬೋಧಿಸುತ್ತಿದ್ದಾರೆಂದು ಕಿಡಿಕಾರಿದ್ದಾರೆ.

ಬೆಂಗಳೂರಲ್ಲಿ ಸಿಎನ್‌ಜಿ ದರ ಏರಿಕೆ

ಕಚ್ಚಾ ತೈಲ ಬೆಲೆಯಲ್ಲಿ ನಿರಂತರ ಏರಿಕೆ ನಡುವೆ ಬೆಂಗಳೂರಿನಲ್ಲಿ ಶನಿವಾರ ಮತ್ತೆ ಸಿಎನ್‌ಜಿ ಬೆಲೆ ಏರಿಕೆಯಾಗಿದ್ದು, ವಾಹನ ಸವಾರರು ಕಂಗಾಲಾಗಿದ್ದಾರೆ. ಸಿಎನ್‌ಜಿ ದರ 2 ರೂಪಾಯಿ ಏರಿಕೆಯಾಗಿದ್ದು, ಕೆಜಿ ಸಿಎನ್‌ಜಿ 93 ರೂಪಾಯಿಯಿಂದ 95 ರೂ.ಗೆ ಹೆಚ್ಚಳವಾಗಿದೆ. ಕಳೆದ 9 ದಿನದಲ್ಲಿ ಮೂರನೇ ಬಾರಿ ಬೆಲೆ ಏರಿಕೆಯಾಗಿದೆ. ಶಾಂತಿನಗರದ ಗೇಲ್ ಗ್ಯಾಸ್ ಮುಂಭಾಗದಲ್ಲಿ ಸಿಎನ್‌ಜಿಗಾಗಿ ಚಾಲಕರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಎದುರಾಗಿದೆ.

"ಮೋದಿ ಅವರೇ, ಈ ಕಂತು ಆಧಾರಿತ ಲೂಟಿಯ ಪಾಲು ಯಾರಿಗೆಲ್ಲ ತಲುಪುತ್ತಿದೆ ಎಂದು ದೇಶಕ್ಕೆ ಲೆಕ್ಕ ಕೊಡಿ. ಈ ಸರ್ಕಾರದ ನಿಜವಾದ ಬಿಕ್ಕಟ್ಟು ಇರುವುದು ನಾಯಕತ್ವದಲ್ಲಿ, ಅದನ್ನು ದೇಶದ 140 ಕೋಟಿ ಭಾರತೀಯರು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದಾರೆ.

-ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ವಿದೇಶಗಳಲ್ಲಿ ಪರಿಸ್ಥಿತಿ ಸಹಜ

ಇದೇ ವೇಳೆ ಭಾರತದಲ್ಲಿ ಇಂಧನ ದರಗಳು ವಿದೇಶಗಳಿಗಿಂತ ಕಡಿಮೆ ಇವೆ ಎಂಬ ಸರ್ಕಾರದ ವಾದವನ್ನು ಖರ್ಗೆ ತಳ್ಳಿಹಾಕಿದ್ದಾರೆ. ಮಧ್ಯಪ್ರಾಚ್ಯ ಸಂಘರ್ಷದ ಸಂದರ್ಭದಲ್ಲಿ ಜಾಗತಿಕ ಇಂಧನ ಬಿಕ್ಕಟ್ಟಿನಿಂದ ತಮ್ಮ ನಾಗರಿಕರನ್ನು ರಕ್ಷಿಸಲು ವಿಶ್ವದ ಇತರ ದೇಶಗಳು ಕೈಗೊಂಡಿರುವ ಜನಪರ ಕ್ರಮಗಳ ತುಲನಾತ್ಮಕ ವಿವರವನ್ನು ಅವರು ನೀಡಿದ್ದಾರೆ. ಇಟಲಿ ದೇಶವು ಇಂಧನದ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಿ ಜನರಿಗೆ ಪರಿಹಾರ ನೀಡಿದೆ. ಆಸ್ಟ್ರೇಲಿಯಾ ಅಬಕಾರಿ ಸುಂಕವನ್ನು ಕಡಿಮೆ ಮಾಡುವ ಮೂಲಕ ನಾಗರಿಕರಿಗೆ ಪೆಟ್ರೋಲ್ ಬೆಲೆಯಲ್ಲಿ ಲೀಟರ್‌ಗೆ ಸುಮಾರು ರೂ.17 ಕಡಿತಗೊಳಿಸಿದೆ. ಜರ್ಮನಿ ತೈಲ ಮೇಲಿನ ತೆರಿಗೆಯನ್ನು ಇಳಿಸಿ ಇಂಧನ ದರವನ್ನು ಲೀಟರ್‌ಗೆ ರೂ.17 ರಿಂದ ರೂ.19 ರಷ್ಟು ಕಡಿಮೆ ಮಾಡಿದೆ. ಬ್ರಿಟನ್ ಪ್ರತಿ ಮನೆಗೆ 100 ತೈಲ ಸಹಾಯಧನ ನೀಡಿದ್ದಲ್ಲದೆ ಇಂಧನ ಮತ್ತು ವಿದ್ಯುತ್ ಮೇಲಿನ ತೆರಿಗೆಯನ್ನು ಕಡಿತಗೊಳಿಸಿದೆ. ಹಾಗೆಯೇ ಐರ್ಲೆಂಡ್ 250 ಮಿಲಿಯನ್ ಯುರೋಗಳ ಪರಿಹಾರ ಪ್ಯಾಕೇಜ್ ಘೋಷಿಸಿ, ಪೆಟ್ರೋಲ್ ಬೆಲೆಯನ್ನು ಸರಿಸುಮಾರು 14 ರೂ. ಮತ್ತು ಡೀಸೆಲ್ 18 ರೂ. ಇಳಿಸಿದೆ ಎಂದು ವಿವರಿಸಿದ್ದಾರೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಜಾಗತಿಕ ಇಂಧನ ದರಗಳು ಏರಿಕೆಯಾಗುತ್ತಿದ್ದು, ದೇಶಿ ತೈಲ ಕಂಪನಿಗಳು ಮೇ 15 ರಿಂದ ಸಾರ್ವಜನಿಕರ ಮೇಲೆ ಇದರ ಹೊರೆಯನ್ನು ವರ್ಗಾಯಿಸಲು ಆರಂಭಿಸಿವೆ.

ಮೇ 15 ರಂದು ಲೀಟರ್‌ಗೆ ಭರ್ಜರಿ ರೂ.3 ಏರಿಕೆ ಮಾಡಲಾಗಿತ್ತು, ತದನಂತರ ಮೇ 19 ರಂದು 90 ಪೈಸೆ ಹೆಚ್ಚಿಸಲಾಯಿತು. ಶನಿವಾರದ ಏರಿಕೆಯೂ ಸೇರಿ ಕಳೆದ 10 ದಿನಗಳಲ್ಲಿ ಇಂಧನ ದರಗಳು ಒಟ್ಟು ರೂ.5 ರಷ್ಟು ಹೆಚ್ಚಳವಾಗಿದೆ. ಈ ಬೆಲೆ ಏರಿಕೆಯೊಂದಿಗೆ ದೆಹಲಿಯಲ್ಲಿ ಪೆಟ್ರೋಲ್ ದರ ರೂ.99.51 ಕ್ಕೆ ಹಾಗೂ ಡೀಸೆಲ್ ದರ ರೂ.92.49 ಕ್ಕೆ ತಲುಪಿದ್ದು, ದೇಶದ ಪ್ರಮುಖ ನಗರಗಳಲ್ಲಿ ಪೆಟ್ರೋಲ್ ಈಗಾಗಲೇ ರೂ.100ರ ಗಡಿ ದಾಟಿ ಸಾರ್ವಜನಿಕರಿಗೆ ಆರ್ಥಿಕ ಹೊರೆಯಾಗಿ ಪರಿಣಮಿಸಿದೆ.

ಗೃಹಲಕ್ಷ್ಮಿ ಹಣ ಪಾವತಿಸದೆ ಮಹಿಳೆಯರಿಗೆ ವಂಚನೆ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ತಲುಪಬೇಕಿದ್ದ ಸುಮಾರು 5,000 ಕೋಟಿ ರೂ. ಹಣವನ್ನು ಅರ್ಹ ಮಹಿಳೆಯರ ಖಾತೆಗೆ ಜಮೆ ಮಾಡದೆ ವಂಚಿಸಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಆರೋಪಿಸಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಗ್ಯಾರಂಟಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಈ ರೀತಿ ಅನ್ಯಾಯ ಮಾಡುತ್ತಿರುವುದು ಶೋಚನೀಯ. ಈ ಹಣದ ಸಂಪೂರ್ಣ ವಿವರವನ್ನು ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಗ್ರಹಿಸಿದರು. 2024-25ನೇ ಸಾಲಿನಲ್ಲಿ ಮನೆಯ ಯಜಮಾನಿಯರಿಗೆ ಕೇವಲ 10 ತಿಂಗಳ ಹಣ ಮಾತ್ರ ನೀಡಲಾಗಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣವನ್ನು ಇನ್ನುವರೆಗೂ ಪಾವತಿಸಿಲ್ಲ. ಈ ಎರಡು ತಿಂಗಳಿಗಾಗಿ ಬರೋಬ್ಬರಿ 5,000 ಕೋಟಿ ರೂಪಾಯಿ ಹಣ ಮೀಸಲಿಟ್ಟಿದ್ದರೂ, ಅದು ಫಲಾನುಭವಿಗಳಿಗೆ ತಲುಪಿಲ್ಲವೆಂದು ದೂರಿದ್ದಾರೆ.

2024-25ರ ಆರ್ಥಿಕ ವರ್ಷದಲ್ಲಿ ಒಟ್ಟು 1,28,80,594 ಫಲಾನುಭವಿಗಳಿದ್ದರು. ಅವರಿಗಾಗಿ ಬಜೆಟ್‌ನಲ್ಲಿ 28,608.4 ಕೋಟಿ ರೂ. ಸರ್ಕಾರ ಮೀಸಲಿಟ್ಟಿತ್ತು. ವಾಸ್ತವವಾಗಿ ಕೇವಲ 23,608 ಕೋಟಿ ರೂ. ಮಾತ್ರ 10 ತಿಂಗಳ ಅವಧಿಗೆ ಬಿಡುಗಡೆ ಮಾಡಲಾಗಿದೆ. ಬಜೆಟ್‌ನಲ್ಲಿ ಹಣ ನಿಗದಿ ಯಾಗಿದ್ದರೂ 2025ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆಯ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡದೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆಯೆಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಪ್ರಚಾರ ಪಡೆಯುತ್ತಿರುವ ಕಾಂಗ್ರೆಸ್ ಸರ್ಕಾರ, ಅರ್ಹ ಫಲಾನುಭವಿಗಳಿಗೆ ತಲುಪಬೇಕಾದ ಹಣವನ್ನು ಸರಿಯಾದ ಸಮಯಕ್ಕೆ ನೀಡದೆ ಸತಾಯಿಸುತ್ತಿದೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ನಾನು ಕನ್ನಡಿಗ ಎಂದು ತಿರುಗೇಟು

ನಿಖಿಲ್ ಕುಮಾರಸ್ವಾಮಿ ಸ್ಟೇಟಸ್ ಏನು ಎಂದು ಪ್ರಶ್ನಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ನಾನು ಕನ್ನಡಿಗ ಅದುವೇ ನನ್ನ ಸ್ಟೇಟಸ್ ಎಂದು ನಿಖಿಲ್ ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ನಾನು ಕನ್ನಡ ನಾಡಿನ ಹುಡುಗ, ಇಲ್ಲಿ ನಾನು ತೆರಿಗೆ ಕಟ್ಟಾ ಇದ್ದೇನೆ. ನಾಡಿನ ಜನರ ಪರವಾಗಿ ಸಾಮಾನ್ಯ ಪ್ರಜೆಯಾಗಿ ಪ್ರಶ್ನೆ ಮಾಡ್ತಿದ್ದೇನೆ. ಇದು ನನ್ನ ಸ್ಟೇಟಸ್. ಕರ್ನಾಟಕದಲ್ಲಿ ಹುಟ್ಟಿರುವ ಕನ್ನಡ ನಾಡಿನ ಹುಡುಗ, ಕನ್ನಡ ನಾಡಿನ ನೆಲ, ಜಲ, ಭಾಷೆಯ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿರುವ ಹುಡುಗ, ಸರ್ಕಾರಕ್ಕೆ ತೆರಿಗೆ ಕಟ್ಟುತ್ತಿರುವ ಹುಡುಗ, ಕನ್ನಡ ನಾಡಿನ ಒಬ್ಬ ಸಾಮಾನ್ಯ ಪ್ರಜೆ ಎಂದು ಸಾಮಾಜಿಕ ಜಾಲತಾಣ ಪೋಸ್ಟ್ ಮೂಲಕ ವಾಗ್ದಾಳಿ ನಡೆಸಿದ್ದಾರೆ.

ಆನ್‌ಲೈನ್ ದೋಖಾ: 150 ಕೋಟಿ ರೂ. ಕಳೆದುಕೊಂಡ ಜನರು

ಜಾಗರೂಕರಾಗಿರುವಂತೆ ಶಾಸಕ ಸಿ.ಎನ್.ಬಾಲಕೃಷ್ಣ ಕಿವಿಮಾತು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಅಪರಿಚಿತ ಆ್ಯಪ್‌ಗಳನ್ನು ನಂಬಿ ಜಿಲ್ಲೆಯ ಏಳೂವರೆ ಸಾವಿರ ಜನರು ಸುಮಾರು 150 ಕೋಟಿ ರೂ. ಕಳೆದುಕೊಂಡಿದ್ದು, ಮೊಬೈಲ್ ಬಳಸುವಾಗ ಜಾಗರೂಕರಾಗಿರ ಬೇಕೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಸಲಹೆ ನೀಡಿದರು.

ತಾಲ್ಲೂಕಿನ ಹಿರಿಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ 2025-26 ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ ಅಂಡ್ ಗೈಡ್ಸ್ ಹಾಗು ರೆಡ್‌ಕ್ರಾಸ್ ಮತ್ತು ರೆಡ್ ರಿಬ್ಬನ್ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿ, ಬ್ಯಾಂಕ್ ಖಾತೆ ಹೊಂದಿರುವ ಮೊಬೈಲ್ ಬಳಕೆದಾರರು ಸಾಕಷ್ಟು ಎಚ್ಚರಿಕೆ ವಹಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಅಪರಿಚಿತರು ಅಪಾಯಕಾರಿ ಆ್ಯಪ್‌ಗಳ ಲಿಂಕ್ ಕಳುಹಿಸುವುದು ಇಲ್ಲವೇ ಕರೆ ಮಾಡಿ ಒಟಿಪಿ ಕೇಳಿ ಆನ್‌ಲೈನ್ ಮೂಲಕ ನಿಮ್ಮ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುವ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದರು.

ಇತ್ತೀಚಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಮೊಬೈಲ್ ಬಳಕೆ ಅಗತ್ಯವಿದೆ. ಆದರೆ ದುರ್ಬಳಕೆ ಮಾಡಬಾರದು. ಮೊಬೈಲ್‌ನಲ್ಲಿ ವಿಶ್ವದ ಎಲ್ಲಾ ಮಾಹಿತಿಯು ಲಭ್ಯವಾಗಲಿದೆ. ಉಪಯುಕ್ತ ಮಾಹಿತಿ ಯನ್ನು ಮಾತ್ರ ಪಡೆದರೆ ಬದುಕು ಸುಂದರವಾಗಲಿದೆ. ದುರ್ಬಳಕೆ ಮಾಡಿಕೊಂಡರೆ ಭವಿಷ್ಯವೂ ನಿಂತ ನೀರಾಗಲಿದೆ ಎಂದು ವಿದ್ಯಾರ್ಥಿಗಳಿಗೆ ಎಚ್ಚರಿಸಿದರು.

ಕ್ರೀಡೆ ಎಂಬುದು ಆರೋಗ್ಯದ ಮಂತ್ರ. ಕ್ರೀಡೆಗಳಲ್ಲಿ ಸಕ್ರಿಯವಾಗಿ ತೊಡಗುವುದರಿಂದ ದೈಹಿಕ ಹಾಗು ಮಾನಸಿಕ ಆರೋಗ್ಯವು ವೃದ್ಧಿಯಾಗಲಿದೆ. ದಿನದಲ್ಲಿ ಒಂದಷ್ಟು ಸಮಯ ಬಿಡುವಿನ ವೇಳೆಯಲ್ಲಿ ದಿನ ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಅದರಿಂದ ವಿಶ್ವದ ಎಲ್ಲಾ ಮಾಹಿತಿ ಲಭ್ಯವಾಗಲಿದೆ. ದಿನ ಪತ್ರಿಕೆಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನವು ವೃದ್ಧಿಯಾಗಲಿದ್ದು ಬದುಕಿನ ಸಾಕಷ್ಟು ತಿರುವುಗಳಿಗೆ ದಾರಿ ದೀಪವಾಗಲಿದೆ ಎಂದು ಸಲಹೆ ನೀಡಿದರು.

ಈ ವರ್ಷದ ಬೇಸಿಗೆಯ ಪ್ರಾರಂಭದಿಂದಲೂ ಬಿಸಿಲಿನ ತಾಪಮಾನ ಹೆಚ್ಚಾಗಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಪರಿಸರ ಸಂರಕ್ಷಣೆಯೇ ಪ್ರಕೃತಿಯ ಸಮತೋಲನದ ಮೂಲ ಮಂತ್ರ. ಮರ-ಗಿಡಗಳನ್ನು ಬೆಳೆಸಿದ್ದಲ್ಲಿ ಮಾತ್ರ ಭೂಮಿಯ ಮೇಲೆ ಸಕಲ ಜೀವ ರಾಶಿಗಳು ಬದುಕುಳಿಯಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಡಿ.ಎಸ್. ಪ್ರತಿಮಾ ಅವರು ಮಾತನಾಡಿ, ದೇಶಕ್ಕೆ ಉತ್ತಮ ಪ್ರಧಾನಿಯಾಗಿ ಹೆಚ್.ಡಿ. ದೇವೇಗೌಡರು, ಸಾಹಿತ್ಯ ಕ್ಷೇತ್ರಕ್ಕೆ ಎಸ್.ಎಲ್.ಭೈರಪ್ಪ ಅವರನ್ನು ಸೇರಿ ಕ್ರೀಡೆ, ಆರೋಗ್ಯ, ಸಾಹಿತ್ಯ, ರಾಜಕೀಯ ಹಾಗು ವಿವಿಧ ಕ್ಷೇತ್ರಗಳಿಗೆ ಸಾಧಕರನ್ನು ಕೊಡುಗೆಯಾಗಿ ನೀಡಿದ ಜಿಲ್ಲೆ ಹಾಸನ ಎಂದು ಬಣ್ಣಿಸಿದರು.

ಶಿಕ್ಷಣ ಸುಲಭದ ತುತ್ತಲ್ಲ, ಶ್ರದ್ಧೆ ಹಾಗು ಶಿಸ್ತಿನಿಂದ ವಿದ್ಯೆಯನ್ನು ದೀಕ್ಷೆ ಪಡೆದು ಓದಿದ್ದಲ್ಲಿ ಶೈಕ್ಷಣಿಕ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳುವುದರ ಜೊತೆಗೆ ಸಮಾಜಕ್ಕೆ ಮಾದರಿಯಾಗಿ ಹೆಸರು ಹಾಗು ಕೀರ್ತಿಯನ್ನು ತರಬಹುದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರಾಂಶುಪಾಲ ಬಿ.ಹೆಚ್.ಲಕ್ಷ್ಮಣಗೌಡ ಅವರು ಮಾತನಾಡಿ, ಕ್ರೀಡೆಯಿಂದ ಆರೋಗ್ಯ ವೃದ್ಧಿಯಾಗಲಿದ್ದು ನಾಯಕತ್ವದ ಗುಣ ಬೆಳೆಯಲಿದೆ. ಕೇವಲ ಪದವಿಗೆ ಶಿಕ್ಷಣ ಅಂತ್ಯಗೊಳಿಸಬೇಡಿ. ಮುಂದುವರಿಸಿ ಉದ್ಯೋಗ ಅವಕಾಶ ಗಿಟ್ಟಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಚನ್ನರಾಯಪಟ್ಟಣ ತಾಲ್ಲೂಕು ನ್ಯಾಯಾಂಗ ನೌಕರರ ನಿರ್ದೇಶಕ ಕೆ.ಎಂ.ಸೋಮಶೇಖರ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್.ಆರ್.ಮರುಳಾರಾಧ್ಯ, ಉಪನ್ಯಾಸಕರಾದ ಕೆ.ಅನಂತ್, ಗೋಪಾಲಕೃಷ್ಣ, ಸಹ ಪ್ರಾಧ್ಯಾಪಕರಾದ ಹೆಚ್.ಜೆ.ಹರೀಶ್, ಎ.ಕೆ.ಕುಮಾರ್, ಡಾ.ಎಂ.ಕೆ.ಮಂಜುನಾಥ್, ಎನ್. ಆರ್.ಆಶಾ, ದೈಹಿಕ ಶಿಕ್ಷಣ ನಿರ್ದೇಶಕ ಡಿ.ಎನ್.ಮನು, ಗ್ರಂಥಪಾಲಕಿ ಬಿ. ಸುನಂದ ಇತರರಿದ್ದರು.

ಫಾರಂ-57ರ ಬಗರ್ ಹುಕುಂ ಭೂಮಿ ಕನಸು ಭಗ್ನ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

- ಸಲ್ಲಿಕೆಯಾದ 1,15,346 ಅರ್ಜಿಗಳಲ್ಲಿ 1,15,276 ತಿರಸ್ಕಾರ
- ನಮೂನೆ-50ರಲ್ಲಿ-37,954, ನಮೂನೆ-53 ರಲ್ಲಿ 21,977 ರೈತರಿಗೆ ಮಂಜೂರಾತಿ

ಹಾಸನ: ಸರ್ಕಾರಿ ಜಮೀನಿನಲ್ಲಿ ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಾ ಭೂಮಿಯ ಕಾನೂನು ಬದ್ಧ ಹಕ್ಕು ಹೊಂದಲು ಫಾರಂ ನಂ.57ರಲ್ಲಿ ಅರ್ಜಿ ಸಿಲ್ಲಿಸಿ ಕಾಯುತ್ತಿದ್ದ ಜಿಲ್ಲೆಯ 1.15 ಲಕ್ಷ ರೈತರಿಗೆ ದೊಡ್ಡ ನಿರಾಸೆಯಾಗಿದೆ. ಸಲ್ಲಿಕೆಯಾಗಿದ್ದ ಅರ್ಜಿಗಳ ಪೈಕಿ ಶೇ.99ರಷ್ಟು ತಿರಸ್ಕಾರಗೊಂಡಿರುವುದು ರೈತರಲ್ಲಿ ಆಕ್ರೋಶ ಮತ್ತು ಅನಿಶ್ಚಿತತೆ ಹೆಚ್ಚಿಸಿದೆ.

ಸರ್ಕಾರದ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ ನಮೂನೆ-57 ರಡಿಯಲ್ಲಿ ಒಟ್ಟು 1,15,346 ರೈತರು ಅರ್ಜಿ ಸಲ್ಲಿಸಿದ್ದರು. ಆದರೆ, ಈ ಪೈಕಿ ಕೇವಲ 70 ಮಂದಿಗೆ ಮಾತ್ರ ಭೂ ಮಂಜೂರಾತಿ ಪತ್ರ ದೊರೆತಿದೆ. ಉಳಿದ ಅರ್ಜಿಗಳು ವಿವಿಧ ಕಾರಣಗಳಿಂದ ತಿರಸ್ಕೃತವಾಗಿವೆ. ಅದರಿಂದ, ಸರ್ಕಾರಿ ಜಮೀನಿನಲ್ಲಿ ಹಲವು ವರ್ಷಗಳಿಂದ ಕೃಷಿ ಮಾಡಿಕೊಂಡು ಭೂ ಮಂಜೂರಾತಿಯ ನಿರೀಕ್ಷೆಯಲ್ಲಿದ್ದ 1,15,276ಕ್ಕೂ ಹೆಚ್ಚು ರೈತರು ತಮ್ಮ ಭೂ ಕನಸನ್ನು ಕೈಬಿಡುವ ಪರಿಸ್ಥಿತಿ ಎದುರಾಗಿದೆ.

(ಜಿಲ್ಲೆಯಲ್ಲಿ ಫಾರಂ, 50, 53, 57 ಅಡಿ ಸಲ್ಲಿಕೆಯಾದ ಅರ್ಜಿಗಳ ವಿವರ)

ಸಲ್ಲಿಕೆಯಾದ ಅರ್ಜಿ	ಫಾರಂ-50	ಫಾರಂ-53	ಫಾರಂ-57
ಸ್ವೀಕೃತವಾಗಿರುವ ಅರ್ಜಿ	94,908	85,468	1,15,346
ಮಂಜೂರು ಮಾಡಿರುವ ಅರ್ಜಿ	37,954	21,977	70
ಸಾಗುವಳಿ ಚೀಟಿ ನೀಡಿರುವ ಸಂಖ್ಯೆ	37,658	21,657	70
ಖಾತೆ ಆಗಿರುವ ಅರ್ಜಿಗಳ ಸಂಖ್ಯೆ	36,988	19,648	70
ಖಾತೆ ಮಾಡಲು ಬಾಕಿ ಇರುವ ಅರ್ಜಿ	670	2,009	00

ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ರೂಪಿಸಲಾದ ಬಗರ್ ಹುಕುಂ ವ್ಯವಸ್ಥೆಯ ಭಾಗವಾಗಿ ಫಾರಂ-57 ಜಾರಿಗೊಂಡಿತ್ತು.

"ಜಿಲ್ಲೆಯಲ್ಲಿ ಫಾರಂ ನಂ.57ರಲ್ಲಿ ಸಲ್ಲಿಸಿದ್ದ ಶೇ.99ರಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಎಲ್ಲಾ ಅರ್ಜಿಗಳನ್ನು ಅಧಿಕಾರಿಗಳು ಕಾನೂನಿನಡಿಯಲ್ಲೇ ನೋಡದೆ ಅರ್ಹರಿಗೆ 94-ಸಿ, 94-ಡಿ ಅಡಿ ಮಂಜೂರು ಮಾಡಲು ಸಾಧ್ಯವೇ ಎಂದು ಪರಿಶೀಲಿಸಲು ಸೂಚಿಸಿದ್ದೇನೆ.

-ಕೃಷ್ಣಭೈರೇಗೌಡ, ಕಂದಾಯ ಸಚಿವ

ಫಾರಂ-50 ಹಾಗು ಫಾರಂ-53ರಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದವರಿಗೆ ಮತ್ತೊಂದು ಅವಕಾಶವೆಂದು ಪರಿಗಣಿಸಲಾಗಿತ್ತು. ಫಾರಂ-57 ಅಡಿಯಲ್ಲಿ ಅರ್ಜಿ ಸಿಲ್ಲಿಸಿದ್ದ ಲಕ್ಷಕ್ಕೂ ಅಧಿಕ ಅರ್ಜಿಗಳನ್ನು ತಿರಸ್ಕರಿಸುವ ಮೂಲಕ ರೈತರಿಗೆ ನಿರಾಸೆಯುಂಟು ಮಾಡಲಾಗದೆ.

ಫಾರಂ-50, 53ರಲ್ಲಿ ಸಾವಿರಾರು ಮಂಜೂರಾತಿ

ಫಾರಂ-50 ಅಡಿಯಲ್ಲಿ ಜಿಲ್ಲೆಯಲ್ಲಿ ಈ ಹಿಂದೆ 94,908 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 37,954 ರೈತರಿಗೆ ಭೂ ಮಂಜೂರು ನೀಡಲಾಗಿದೆ. ಅದರಲ್ಲಿ 37,658 ಮಂದಿಗೆ ಸಾಗುವಳಿ ಚೀಟಿ ವಿತರಿಸಲಾಗಿದ್ದು, 36,988 ರೈತರಿಗೆ ಖಾತೆ ಮಾಡಿಕೊಡಲಾಗಿದೆ. ಇನ್ನೂ ಸುಮಾರು 670 ರೈತರಿಗೆ ಖಾತೆ ಪ್ರಕ್ರಿಯೆ ಬಾಕಿ ಇದೆ.

ಫಾರಂ-53 ಅಡಿಯಲ್ಲಿ ಜಿಲ್ಲೆಯಲ್ಲಿ 85,468 ಮಂದಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿ 21,977 ಮಂದಿಗೆ ಮಂಜೂರಾತಿ ದೊರೆತಿದೆ. ಅದರಲ್ಲಿ 21,657 ಮಂದಿಗೆ ಸಾಗುವಳಿ ಚೀಟಿ ನೀಡಲಾಗಿದ್ದು, 19,648 ಮಂದಿಗೆ ಖಾತೆ ಮಾಡಿಕೊಡಲಾಗಿದೆ. ಇನ್ನೂ 2,009 ರೈತರಿಗೆ ಖಾತೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದೆ.

ತಿರಸ್ಕೃತಗೊಳ್ಳಲು ಹಲವು ಕಾರಣ

ನಮೂನೆ-57 ಅಡಿಯಲ್ಲಿ ಸಲ್ಲಿದ್ದ ಅರ್ಜಿಗಳನ್ನು ತಿರಸ್ಕಾರಗೊಳಿಸಲು ಹಲವು ಕಾರಣ ನೀಡ ಲಾಗಿದೆ. ಅರಣ್ಯ ಭೂಮಿ, ಗೋಮಾಳ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಹಲವರ ಅರ್ಜಿಗಳನ್ನು ತಿರಸ್ಕಾರಗೊಳಿಸಲು ಪ್ರಮುಖ ಕಾರಣವಾಗಿದೆ. ಅರ್ಜಿದಾರರ ಅರ್ಹತೆ ಮತ್ತು ದಾಖಲೆಗಳ ಕೊರತೆ, ಒಂದೇ ಭೂಮಿಗೆ ಹಲವರು ಅರ್ಜಿಸಲ್ಲಿಸಿರುವುದು ಮತ್ತಷ್ಟು ಕಾರಣಗಳಾಗಿವೆ.

» ನಾಲ್ಕನೇ ಪುಟದಲ್ಲಿ

ರಾಘವ್ ಚಡ್ಡಾ ರಾಜ್ಯಸಭೆ ಅರ್ಜಿ ಪರಿಶೀಲನೆ ಸಮಿತಿ ಅಧ್ಯಕ್ಷ

• ಪ್ರಜೋದಯ ವರದಿ

ನವದೆಹಲಿ: ಇತ್ತೀಚೆಗಷ್ಟೇ ಆಮ್ ಆದ್ಮಿ ಪಕ್ಷ (ಎಎಪಿ) ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದ ರಾಘವ್ ಚಡ್ಡಾ ಅವರನ್ನು ರಾಜ್ಯಸಭೆಯ ಅರ್ಜಿಗಳ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಅರ್ಜಿಗಳ ಸಮಿತಿಯನ್ನು ಪುನರ್ ರಚಿಸಿದ ನಂತರ, ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸದನದ 10 ಸದಸ್ಯರನ್ನು ಈ ಸಮಿತಿಗೆ ನಾಮನಿರ್ದೇಶನ ಮಾಡಿದ್ದಾರೆ. ರಾಘವ್ ಚಡ್ಡಾ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ರಾಜ್ಯಸಭೆಯ ಅಧಿಸೂಚನೆ ತಿಳಿಸಿದೆ. ಈ ಸಮಿತಿಯನ್ನು ಮೇ 20 ರಿಂದ ಜಾರಿಗೆ ಬರುವಂತೆ ರಾಜ್ಯಸಭಾ ಸಭಾಪತಿಯವರು ಪುನರ್ ರಚಿಸಿದ್ದಾರೆಂದು ಹೇಳಲಾಗಿದೆ.

ಹರ್ಷ್ ಮಹಾಜನ್, ಗುಲಾಮ್ ಅಲಿ, ಶಂಭು ಶರಣ್ ಪಟೇಲ್, ಮಯಾಂಕ್‌ಕುಮಾರ್ ನಾಯಕ್, ಮಸ್ತಾನ್ ರಾವ್ ಯಾದವ್ ಬೀಡಾ, ಜೆಬಿ ಮಾಥರ್ ಹಿಶಾಮ್, ಸುಭಾಶಿಶ್ ಖುಂಟಿಯಾ, ರುಂಗ್ವಾ ನರ್ಜಾರಿ ಮತ್ತು ಪಿ. ಸಂತೋಷ್ ಕುಮಾರ್ ಅವರು ಸಮಿತಿಯ ಸದಸ್ಯರಾಗಿದ್ದಾರೆ. ಅದರೊಂದಿಗೆ, ರಾಜ್ಯಸಭಾ ಸದಸ್ಯರಾದ ಡಾ.ಮೇನಕಾ ಗುರು ಸ್ವಾಮಿ ಅವರನ್ನು ಕಂಪನಿ ಕಾಯ್ದೆಗಳ (ತಿದ್ದುಪಡಿ) ವಿಧೇಯಕ-2026ರ ಜಂಟಿ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಮತ್ತೊಂದು ಅಧಿಸೂಚನೆ ತಿಳಿಸಿದೆ.

ಭಾರತ್ ಗ್ಯಾಸ್ ಏಜೆನ್ಸಿ ಎದುರು ಜನದಟ್ಟಣೆ: ಸಿಮೆಂಟ್ ಮಂಜು ದೌಡು

• ಪ್ರಜೋದಯ ವರದಿ

ಆಲೂರು: ತಾಲ್ಲೂಕಿನಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಮುಂದುವರಿದಿದ್ದು ಶನಿವಾರ ಬೆಳ್ಳಂ ಬೆಳಿಗ್ಗೆಯೇ ನೂರಾರು ಜನರು ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿರುವ ಭಾರತ್ ಗ್ಯಾಸ್ ಏಜೆನ್ಸಿ ಎದುರು ಕಿ.ಮೀ. ಗಟ್ಟಲೇ ಸರದಿ ಸಾಲಿನಲ್ಲಿ ನಿಂತಿದ್ದರು.

ಕಳೆದ ಒಂದು ಒಂದೂವರೆ ತಿಂಗಳ ಹಿಂದೆ ಬುಕ್ ಮಾಡಿದರೂ ಸಿಲಿಂಡರ್ ಸಿಗುತ್ತಿಲ್ಲ. ನಾವು ಬುಕ್ ಮಾಡಿದ ಸಿಲಿಂಡರ್ ಬೇರೆ ಯಾರಿಗೋ ಪೂರೈಕೆಯಾಗಿದೆ. ಒಟಿಪಿ ಇಲ್ಲದೆಯೇ ಸಿಲಿಂಡರ್ ಪಡೆಯುವ ದಾರಿಯನ್ನು ಏಜೆನ್ಸಿಯವರು ಕಂಡುಕೊಂಡಿದ್ದಾರೆ. ಹೀಗಾಗಿ ಗ್ರಾಹಕರಿಗೆ ಅನ್ಯಾಯವಾಗುತ್ತಿದೆ ಎಂಬ ಆಕ್ರೋಶ ಕೇಳಿಬಂತು. ಸಾಕಷ್ಟು ಹರಸಾಹಸಪಟ್ಟು ಸಿಲಿಂಡರ್ ಪಡೆದುಕೊಂಡು ಹೋಗುತ್ತಿದ್ದವರ ಸಂಭ್ರಮವೂ ಕಂಡು ಬಂತು. ಇನ್ನು ಕೆಲವರು ಏಜೆನ್ಸಿ ವಿರುದ್ಧ ಧಿಕ್ಕಾರ ಕೂಗುತ್ತಾ ಗೊಂದಲದ ವಾತಾವರಣ ಸೃಷ್ಟಿಸಿದರು.

ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಶಾಸಕ ಸಿಮೆಂಟ್ ಮಂಜು ಅವರು ಸಾರ್ವಜನಿಕರ ಸಮಾಧಾನಪಡಿಸಲು ಹರಸಾಹಸ ಪಟ್ಟರು. ಸಾಲಿನಲ್ಲಿ ನಿಂತಿದ್ದ ಪ್ರತಿಯೊಬ್ಬ ಗ್ರಾಹಕರನ್ನು ಭೇಟಿ ಮಾಡಿ, ಸಿಲಿಂಡರ್ ಪಡೆಯುವ ಸಂದರ್ಭದಲ್ಲಿ ಒಟಿಪಿ ತಪ್ಪದೇ ನೀಡಿ ಪಡೆಯಿರಿ ಎಂದು ಮನವರಿಕೆ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಸಿಮೆಂಟ್ ಮಂಜು » ನಾಲ್ಕನೇ ಪುಟದಲ್ಲಿ

ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ

• ಪ್ರಜೋದಯ ವರದಿ

ಅರಸೀಕೆರೆ: ಕ್ರಿಕೆಟ್ ಆಟವಾಡುವುದನ್ನು ಮಧ್ಯದಲ್ಲೇ ಬಿಟ್ಟು ಬಾರದೆ ಇದ್ದಿದ್ದಕ್ಕೆ ಯುವಕನ ಮೇಲೆ ಬ್ಯಾಟ್‌ನಿಂದ ಹಲ್ಲೆ ನಡೆಸಿರುವ ಘಟನೆ ನಗರದಲ್ಲಿ ಇತ್ತೀಚೆಗೆ ನಡೆದಿದೆ.

ನಗರದ ಮುಜಾವರ ಮೊಹಲ್ಲಾ ನಿವಾಸಿ ಕುಲ್ಸುಂ ಅವರ ಪುತ್ರ ಮೊಹಮ್ಮದ್ ಸುಲ್ತಾನ್ ಗಾಯಾಳು.

ನಗರದ ಶಿವಾಲಯ ಎದುರು ಕ್ರಿಕೆಟ್ ಆಡುತ್ತಿದ್ದಾಗ ಅಲ್ಲಿಗೆ ಬಂದ ರುಮಾನ್ ಎಂಬಾತ ಸುಲ್ತಾನ್‌ಗೆ ಬರಲು ಹೇಳಿದ್ದಾನೆ. ಇನ್ನೆರಡು ಬಾಲ್ ಇದೆ ಬರುತ್ತೇನೆ ಸ್ವಲ್ಪ ಇರು ಎಂದು ಹೇಳಿದ್ದಕ್ಕೆ ಆಕ್ರೋಶಗೊಂಡ ರುಮಾನ್ ಕ್ರಿಕೆಟ್ ಬ್ಯಾಟ್‌ನಿಂದ ತಲೆಗೆ ಹೊಡೆಯಲು ಮುಂದಾಗಿದ್ದಾನೆ. ತಕ್ಷಣವೇ ಸುಲ್ತಾನ್ ಅವರು ಕೈ ಅಡ್ಡ ನೀಡಿದ್ದರಿಂದ ಅಪಾಯ ತಪ್ಪಿದೆ. ಗಾಯಾಳು ವನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕ್ಷುಲ್ಲಕ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದಾರೆಂದು ಸಂತ್ರಸ್ತನ ಕುಟುಂಬಸ್ಥರು ಸುಮ್ಮನಿದ್ದರಾದರೂ ಆರೋಪಿ ಆಸ್ಪತ್ರೆಗೆ ಬಂದು ಜೀವ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಆದ್ದರಿಂದ ಆತನಿಂದ ತಮಗೆ ರಕ್ಷಣೆ ನೀಡಬೇಕು ಹಾಗು ಆತನನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಹಾಸನ ಪಕ್ಷಿ ವೀಕ್ಷಕರ ಸಂಘದಿಂದ ಪ್ರವಾಸ | ಅಧ್ಯಯನ, ಛಾಯಾಗ್ರಹಣ

ಗಮನ ಸೆಳೆದ ವಿದೇಶಿ ಪಕ್ಷಿಗಳ ಕಲರವ

• ಪ್ರಜೋದಯ ವರದಿ

ಹಾಸನ: ಸಲೀಂ ಅಲಿ ಪಕ್ಷಿ ವೀಕ್ಷಕರ ಸಂಘ, ಕರ್ನಾಟಕ ವಿದ್ಯಾವರ್ಧಕ ಸಂಘ (ಧಾರವಾಡ) ಹಾಗು ಭಾರತೀಯ ರೆಡ್‌ಕ್ರಾಸ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕೆರೆಕಟ್ಟೆ, ಜಲಚರ ಪಕ್ಷಿಗಳ ಛಾಯಾಗ್ರಹಣ ಮತ್ತು ಚಿಂತನ ಮಂಥನ ಕಾರ್ಯಕ್ರಮ ಯಶಸ್ವಿಯಾಯಿತು.

ಬೆಳಿಗ್ಗೆ 5 ಗಂಟೆಗೆ ಹಾಸನದಿಂದ ಹೊರಟ ಸಮಾನ ಮನಸ್ಕರು ಮೈಸೂರು ಜಿಲ್ಲೆ ಹೊಸ ಅಗ್ರಹಾರ ಕೆರೆಯಲ್ಲಿ ಪಕ್ಷಿಗಳ ವೀಕ್ಷಿಸಿದರು. ವಿದೇಶದಿಂದ ಆಗಮಿಸಿದ ಹತ್ತಾರು ಪ್ರಭೇದದ ಪಕ್ಷಿಗಳನ್ನು ಕಂಡು ಪುಳಕಿತರಾದರು. ಪಕ್ಷಿಗಳ ಹಾರಾಟ, ಆಹಾರ ಅರಸುವ ವಿಧಾನ, ಸಾರ್ವಜನಿಕರನ್ನು ಕಂಡು ಆತಂಕಪಡುವುದು ಹಾಗು ನಡೆನುಡಿಯ ಕುರಿತು ಪಕ್ಷಿ ಪ್ರೇಮಿಗಳು ವಿಶ್ಲೇಷಣೆ ಮಾಡಿದರು.

ಶೀತ ಪೀಡಿತ ಪ್ರದೇಶಗಳಲ್ಲಿ ವಾಸಿಸುವ ಪಕ್ಷಿಗಳು ಪ್ರತಿವರ್ಷ ಸಾವಿರಾರು ಕಿ.ಮೀ. ದೂರದಿಂದ ಭಾರತಕ್ಕೆ ಬರುವುದು ವಾಡಿಕೆ. ಸುಮಾರು 30 ರಿಂದ 40 ಸಾವಿರ ಕಿ.ಮೀ. ದೂರ ಹಾರಿ ಬಂದು ಭಾರತದ ವಿವಿಧ ಪಕ್ಷಿಧಾಮಗಳಿಲ್ಲಿ ನೆಲೆಸುತ್ತವೆ. 6 ತಿಂಗಳ ಕಾಲ ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿ ಆಹಾರ ಹೆಕ್ಕಿ ತಿಂದು ಮತ್ತೆ ತಮ್ಮ ದೇಶಗಳಿಗೆ ಪ್ರಯಾಣ ಬೆಳೆಸುತ್ತವೆ. 40 ಸಾವಿರ ಕಿ.ಮೀ. ಹಾರಿ ಬರುವ ಪಕ್ಷಿಗಳು ನಿಗದಿತ ಸ್ಥಳಗಳಲ್ಲೇ ವಿಶ್ರಾಂತಿ ಪಡೆಯುತ್ತದೆ ಎನ್ನುವುದೇ ರೋಚಕ ಹಾಗು ಆಸಕ್ತಿದಾಯಕವಾಗಿದೆ.

ಕೆರೆಯಲ್ಲಿ ಎಗರೆಟ್ಸ್, ಹೆರಾನ್ಸ್, ರೇಡರ್ಸ್, ಪೆಲಿಕೆನ್ಸ್, ಗ್ರೇ ಪೆಲಿಕೆನ್ಸ್, ಡಕ್ಸ್ ಸ್ಥಳೀಯ ಪಕ್ಷಿಗಳು. ಇವು ಮುಂಜಾನೆ ಬೇಗ ಬಂದು ಈ ಕೆರೆಯಲ್ಲಿ ಇಳಿದು ಸಂಜೆ ವರೆಗೆ ಮೀನುಗಳನ್ನು ತಿಂದು ಮತ್ತೆ ಮೈಸೂರಿನ ರಂಗನ ತಿಟ್ಟಿಗೆ ಹೋಗಿ ಬೆಳಿಗ್ಗೆ ಬರುತ್ತವೆ. ಇದು ಇವುಗಳ ದಿನಚರಿ. ಆಹಾರ ಅರಸಿ ಬರುವ ಈ ಪಕ್ಷಿಗಳು ಅತಿಕಡಿಮೆ ನೀರಿರುವ ಕೆರೆಗಳಲ್ಲಿ ಇಳಿದು ಅದರಲ್ಲಿರುವ ಮೀನುಗಳನ್ನು ಹೆಕ್ಕಿ ತಿನ್ನುತ್ತವೆ. ಕೆಲವು ಪಕ್ಷಗಳು ನೀರಿನಲ್ಲಿದ್ದರೆ ಕೆಲವು ಗಿಡಮರಗಳ ಮೇಲೆ ಇರುತ್ತದೆ.

"ವಿದೇಶಗಳಿಂದ ಭಾರತಕ್ಕೆ ವಲಸೆ ಬರುವ ಪಕ್ಷಿಗಳ ಕುರಿತು ತಿಳಿಯುವುದು ಸಾಕಷ್ಟಿದೆ. ಆದ್ದರಿಂದಲೇ ನಾವು ಪ್ರತಿ ವರ್ಷ ಪ್ರವಾಸ ಕೈಗೊಳ್ಳುತ್ತೇವೆ. ಪಕ್ಷಿಗಳಿರುವ ಸ್ಥಳಕ್ಕೆ ತೆರಳಿ ಅವುಗಳ ದಿನಚರಿ ಗಮನಿಸುತ್ತೇವೆ. ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ಬರುವ ನೂರಾರು ಬಗೆಯ ಪಕ್ಷಿಗಳು ಹಾಗು ಅವುಗಳ ದಿನಚರಿ ಆಶ್ಚರ್ಯ ತರಿಸುತ್ತದೆ.

-ಬಿ.ಎಸ್.ದೇಸಾಯಿ, ಪಕ್ಷಿವೀಕ್ಷಕರ ಸಂಘದ ಅಧ್ಯಕ್ಷ

ಕರ್ನಾಟಕದ ಶ್ರೀರಂಗಪಟ್ಟಣ ಸಮೀಪ ಇರುವ ರಂಗನತಿಟ್ಟು ಪಕ್ಷಿಧಾಮಕ್ಕೆ ಹತ್ತಾರು ದೇಶಗಳ ಪಕ್ಷಿಗಳು ಬರುತ್ತದೆ. ತುಂಗಭದ್ರ ಅಣೆಕಟ್ಟೆ, ಗೊರೂರು ಅಣೆಕಟ್ಟೆ, ಸಾಗರ ಕಟ್ಟೆಗಳಲ್ಲಿ ನೀರು ಕಡಿಮೆ ಆದಾಗ ನಮ್ಮ ದೇಶದ ನೂರಾರು ಬಗೆಯಪಕ್ಷಿಗಳನ್ನು ನೋಡಬಹುದು. ಒಂದೊಂದು ಪ್ರಭೇದದ ಪಕ್ಷಿಗಳ ಗುಣ ವಿಶೇಷಗಳು ಬೇರೆ ಬೇರೆ ಇರುತ್ತದೆ. ಕೊಕ್ಕರೆ ಬೆಳ್ಳೂರಿನಲ್ಲಿಯೂ ಪಕ್ಷಿಗಳು ನೆಲಸುತ್ತಿದ್ದು ಪಕ್ಷಿ ವೀಕ್ಷಕರ ಸಂಘ ಮುಂದಿನ ಬಾರಿ ಅಲ್ಲಿಗೆ ಭೇಟಿ ನೀಡಲಿದೆ.



ಈ ಸಂದರ್ಭದಲ್ಲಿ ಖ್ಯಾತ ಛಾಯಾಗ್ರಾಹಕ ಕೆ.ಪಿ.ಸತ್ಯನಾರಾಯಣ್ ಅವರು, ಪಕ್ಷಿಗಳ ಛಾಯಾಚಿತ್ರ, ತೆಗೆದುಕೊಳ್ಳಬೇಕಾದಾಗ ಬಳಸಬೇಕಾದ ಕ್ಯಾಮರಾ, ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸಿದರು.

ಪಕ್ಷಿ ವೀಕ್ಷಣೆಗೆ ಹಾಸನ ಜಿಲ್ಲಾ ಪಕ್ಷಿವೀಕ್ಷಕರ ಸಂಘದ ಹೆಮ್ಮಿಗೆ ಮೋಹನ್, ಬಿ.ಎಸ್. ದೇಸಾಯಿ, ಬಿ.ಆರ್.ಉದಯಕುಮಾರ್, ಕೆ.ಪಿ. ಸತ್ಯನಾರಾಯಣ, ಹೆಚ್.ವಿ.ಸುರೇಶ್‌ಕುಮಾರ್, ಲೇಖಕ ಗೊರೂರು ಅನಂತರಾಜು, ಸುಬ್ಬಸ್ವಾಮಿ, ರವಿಕುಮಾರ್, ಭಾರತೀಶ್, ಗಿರೀಶ್, ಭೀಮರಾಜ್, ಜಯಪ್ರಕಾಶ್, ಪ್ರಭಾಕರ್, ಯೋಗಾನಂದ, ವಿಶ್ವನಾಥ್, ನವೀನ್‌ಕುಮಾರ್, ಶೋಭಾ, ಪ್ರಭಾಕರ್ ಭಾಗವಹಿಸಿದ್ದರು.

ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿ: ಮಹಿಳೆ ಸಾವು

• ಪ್ರಜೋದಯ ವರದಿ

ಹಾಸನ: ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿಯಾಗಿ ಮಹಿಳೆ ಮೃತಪಟ್ಟಿರುವ ಘಟನೆ ಗಂಡಸಿ-ಹಾಸನ ರಸ್ತೆಯ ಚನ್ನಮ್ಮನಹಳ್ಳಿ ಸಮೀಪ ನಡೆದಿದೆ.

ರಾಮನಗರ ಜಿಲ್ಲೆ ವಿಜಯನಗರ ಬಡಾವಣೆಯ ಶಾಮಲಾ ಮೃತರು. ಚನ್ನಮ್ಮನಹಳ್ಳಿ ಸಮೀಪ ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ ಮಾಡಿಕೊಂಡಿರುವ ಕುಟುಂಬಸ್ಥರು ಕಳೆದ 8 ವರ್ಷಗಳಿಂದ ಇಲ್ಲೇ ವಾಸವಿದ್ದರು. ಶುಕ್ರವಾರ ಸಂಜೆ ಕೂಲಿಯವರನ್ನು ಮಾತನಾಡಿಸಲೆಂದು ರಸ್ತೆ ದಾಟುತ್ತಿದ್ದಾಗ ಗಂಡಸಿ ಕಡೆಯಿಂದ ವೇಗವಾಗಿ ಬಂದ ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಮಹಿಳೆ ಸಿಮೆಂಟ್ ರಸ್ತೆಯ ಮೇಲೆ ಬಿದ್ದಿದ್ದರಿಂದ ಹಣೆ, ತಲೆ ಹಾಗು ಕೈಗೆ ಏಟಾಗಿದೆ. ಆ್ಯಂಬುಲೆನ್ಸ್ ಮೂಲಕ ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೇಕಾಗಿದ್ದಾರೆ

ಹಾಸನದ ಫ್ಯಾಕ್ಟರಿಗಳಲ್ಲಿ ಕಾರ್ಯನಿರ್ವಹಿಸಲು ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ.

1) ಫೀಲ್ಡ್ ಆಫೀಸರ್

★ ಕನಿಷ್ಠ 3 ವರ್ಷಗಳ ಅನುಭವ, ★ಮ್ಯಾನ್ ಪವರ್ ನಿರ್ವಹಿಸುವ ಸಾಮರ್ಥ್ಯ ★ ಆಕರ್ಷಕ ವೇತನ ನೀಡಲಾಗುವುದು.

ಆಸಕ್ತರು ಸಂಪರ್ಕಿಸಿ

88848 00010

ಆ ಒಂದು ಶಾಲೆಯ ಹೆಸರು

ಮನೆ-ಮನಗಳ ಬೆಳಗುವ ದೀಪ

ಕರುನಾಡ ಒಡಲಲ್ಲಿ ಮಲೆನಾಡ ಮಡಿಲಲ್ಲಿ ತುಂಗೆ ಶಾಂತವಾಗಿ ಜುಳುಜುಳು ನಿನಾದ ಗೈಯುತ್ತ ಹರಿಯುತ್ತಿದ್ದಾಳೆ. ತುಂಗೇರಿ ಮಲೆನಾಡಿನ ತುಂಗಾ ತೀರದ ಒಂದು ಸುಂದರ ಹಳ್ಳಿ. ಹಸಿರು ಹೊಲಗಳು, ಹರಿವ ಹೊಳೆ, ಗಾಳಿಗೆ ತೂಗುವ ತೆಂಗಿನ ಮರಗಳು, ಹಸಿರು ಹೊಲಗಳ ಮೇಲೆ ಹರಡುವ ಮಂಜು ಬೆಳ್ಳಿಯ ಹಾಸಿನಂತೆ ಹರಡಿ ಕೊಂಡಿತ್ತು. ಆ ಹಳ್ಳಿಯ ಒಂದು ಕುಟುಂಬ ಲೋಕಪ್ಪನದು. ಹೆಂಡತಿ ವನಜಮ್ಮ ಮನೆಯ ಆಧಾರಸ್ತಂಭ. ಅವಳು ಮಾತಿನಲ್ಲಿ ಮಧುರತೆ, ಕಷ್ಟದಲ್ಲಿ ಧೈರ್ಯವನ್ನು ನೀಡುತ್ತಿದ್ದಳು. ಮಗ ಸುಂದರ ಎಂಟನೇ ತರಗತಿ ವಿದ್ಯಾರ್ಥಿ ಹಾಗೂ ಮಗಳು ನಯನ ಆರನೇ ತರಗತಿ ವಿದ್ಯಾರ್ಥಿನಿ. ಇಬ್ಬರೂ ಮಕ್ಕಳು ಓದಿನಲ್ಲಿ ಮುಂದಿದ್ದರು. ಇವರದು ಪ್ರೀತಿ ತುಂಬಿದ ಬಡರೈತ ಕುಟುಂಬ. ಲೋಕಪ್ಪ ಸರಳ ರೈತ. ಅವನ ಕೈಗಳಲ್ಲಿ ಮಣ್ಣಿನ ವಾಸನೆ, ಹೃದಯದಲ್ಲಿ ಕುಟುಂಬದ ಪ್ರೀತಿ. ಲೋಕಪ್ಪನಿಗೆ ಅವನ ಮನೆಯೇ ಮಂತ್ರಾಲಯ ಅವರ ಮನಸೇ ದೇವಾಲಯ. ಕುಟುಂಬವೇ ತನ್ನ ಪ್ರಪಂಚ. ಕುಟುಂಬದಲ್ಲಿ ಹಣಕಾಸಿನ ತೊಂದರೆ ಸಾಮಾನ್ಯವಾಗಿತ್ತು. ಮಗ ಸುಂದರನಿಗೆ ಓದಿನಲ್ಲಿ ಆಸಕ್ತಿ, ಆದರೆ ತಂದೆಯ ಕಷ್ಟವನ್ನು ನೋಡಿದಾಗ ಹೊಲಕ್ಕೆ ಓಡಿಬರುವ ಮನಸ್ಸು. ಮಗಳು ನಯನ ಚಂದದ ನಗು ಬೀರುತ್ತಾ, ಕನಸಿನ ಕಣ್ಣುಗಳನ್ನು ಹೊಂದಿದ್ದಳು. ಶಿಕ್ಷಕಿ ಆಗಬೇಕೆಂಬ ಕನಸು ಜನ್ಮಜಾತವಾಗಿತ್ತು.

ಒಂದು ದಿನ ಬೆಳಿಗ್ಗೆ ಲೋಕಪ್ಪ ಮಗಾ ಸುಂದರಾ ಬೇಗ ಎದ್ದು ಬಾ, ಹೊಲಕ್ಕೆ ಹೋಗಬೇಕು, ಎಂದು ಕರೆದ. ಬರುತ್ತೇನೆ ಅಪ್ಪ, ಎಂದ ಸುಂದರ. ಆದರೆ ಅವನ ಕಣ್ಣುಗಳಲ್ಲಿ ಬೇರೆಯದೇ ಕನಸುಗಳು ಕಾಣಿಸುತ್ತಿದ್ದವು. ವನಜಮ್ಮ ಮುದ್ದೆ ಮಾಡಲು, ಅಡಿಗೆಯಲ್ಲಿ ಹಿಟ್ಟನ್ನು ಬೆರೆಸುತ್ತಾ, ಮಕ್ಕಳು ಓದಬೇಕು ಲೋಕಪ್ಪ ನಮ್ಮಂತಾಗಬಾರದು, ಎಂದು ನಿಧಾನವಾಗಿ ಹೇಳಿದಳು. ಲೋಕಪ್ಪ ಕ್ಷಣಕಾಲ ಮೌನವಾದ. ನಂತರ ಹೌದು ಆದರೆ ಹೊಲವನ್ನೂ ನೋಡ್ಕೋ ಬೇಕು ವನಜಾ..... ಹೊಲವೇ ನಮ್ಮ ಜೀವ. ಎಂದನು. ಒಲವೇ ನಮ್ಮ ಬದುಕು ಎನ್ನುತ್ತಾ ನಯನ ಬಂದು, ಅಮ್ಮ, ನಾನು ಶಾಲೆಗೆ ಹೋಗಿ ಶಿಕ್ಷಕಿ ಆಗ್ತೇನೆ. ನಮ್ಮ ಹಳ್ಳಿಯಲ್ಲಿ ದೊಡ್ಡ ಶಾಲೆ ಮಾಡ್ತೀನಿ! ಅಂದಳು. ಅವಳ ಮಾತು ಕೇಳಿ ಎಲ್ಲರ ಮುಖದಲ್ಲಿ ಒಂದು ಸಣ್ಣ ನಗು ಮೂಡಿತು. ಆ ನಗುವೇ ಆ ಮನೆಯ ದೀಪ.

ಹಳ್ಳಿಯಲ್ಲಿ ಜೀವನವೆಂದರೆ ಸುಲಭವಿರಲಿಲ್ಲ. ಮಳೆ ಸರಿಯಾಗಿ ಬಂದರೆ ಬೆಳೆ, ಇಲ್ಲದಿದ್ದರೆ ಸಾಲ. ಒಂದು ವರ್ಷ ಮಳೆ ಬರದೆ ಹೊಲ ಒಣಗಿ ಹೋಗಿತ್ತು. ಲೋಕಪ್ಪ ಕಳವಳದಿಂದ ಹೊಲದ ಕಡೆ ನೋಡುತ್ತಿದ್ದ. ಇವಾಗ ಏನ್ಮಾಡೋದು? ಅವನು ತನ್ನಲ್ಲೇ ಮಾತಾಡಿದ. ಸುಂದರ್ ಹತ್ತಿರ ಬಂದು, ಅಪ್ಪ, ನಾನು ನಗರಕ್ಕೆ ಹೋಗಿ ಕೆಲಸ ಮಾಡ್ತೀನಿ. ನಿಮಗೆ ಸಹಾಯ ಮಾಡ್ತೀನಿ, ಅಂತ ಹೇಳ್ದ. ವನಜಮ್ಮ ತಕ್ಷಣ, ಇಲ್ಲ ಸುಂದರಾ ನೀನು ಓದು ಮುಗಿಸ್ಬೇಕು ಆಮೇಲೆ ಕೆಲಸ ಮಾಡುವಿಯಂತೆ, ಅಂತ ಅಂದಳು. ಆ ಮಾತು ಮನೆ ತುಂಬ ಪ್ರತಿಧ್ವನಿಸಿತು. ಆ ದಿನ ಲೋಕಪ್ಪ ಒಂದು ನಿರ್ಧಾರ ತೆಗೆದುಕೊಳ್ಳುವ ಅಗತ್ಯವಿತ್ತು. ಆ ರಾತ್ರಿ, ಮನೆಗೆ ಬೆಳಕಾಗಿದ್ದ ದೀಪದ ಮುಂದೆ ಲೋಕಪ್ಪ ಕುಳಿತಿದ್ದ. ಈ ದೀಪ ನಮ್ಮ ಮನೆ ಮಾತ್ರ ಅಲ್ಲ ನಮ್ಮ ಮಕ್ಕಳ ಭವಿಷ್ಯವನ್ನು ಬೆಳಗಬೇಕು, ಎಂದು ಅವನು ನಿರ್ಧರಿಸಿದ. ಮಾರನೇ ದಿನ ಸುಂದರಾ, ನೀನು ಓದು ಮುಂದುವರಿಸು. ನಯನ, ನೀನು ಕೂಡ. ನಾನು ಏನಾದರೂ ಮಾಡಿ ಈ ಮನೆ ನಡೆಸ್ತೇನೆ, ಎಂದ ಲೋಕಪ್ಪ. ವನಜಮ್ಮನ ಕಣ್ಣಲ್ಲಿ ನೀರು ಆದರೆ ಅದು ದುಃಖದ ಕಣ್ಣೀರು ಅಲ್ಲ, ತನ್ನ ಮಕ್ಕಳ ಭವಿಷ್ಯಕ್ಕಾಗಿ ಸಂತೋಷದ ಕಣ್ಣೀರು.

ಕನಸುಗಳ ದಾರಿ: ಆ ದಿನದಿಂದ ಲೋಕಪ್ಪನ ಮನಸ್ಸಿನಲ್ಲಿ ಒಂದು ದೃಢ ನಿರ್ಧಾರ ಹುಟ್ಟಿತ್ತು. ನನ್ನ ಮಕ್ಕಳು ನನ್ನಂತಾಗಬಾರದು. ಅವರು ಬೆಳಕಾಗಬೇಕು. ಹಳ್ಳಿಯಲ್ಲಿ ಮಳೆ ಇನ್ನೂ ಬಂದಿರಲಿಲ್ಲ. ಹೊಲಗಳಲ್ಲಿ ನೆಲ ಬಿರುಕು ಬಿಟ್ಟು ನೀರಿಗಾಗಿ ಬಾಯ್ದೆರೆದುಕೊಂಡಿದ್ದವು. ಆದರೆ ಲೋಕಪ್ಪನ ಮನೆಯೊಳಗೆ ಹೊಸ ನಿರೀಕ್ಷೆ ಬೆಳಗುತ್ತಿತ್ತು. ಸುಂದರ್ ಶಾಲೆಗೆ ಹೋಗುತ್ತಿದ್ದರೂ, ಅವನ ಮನಸ್ಸು ಹೊಲದಲ್ಲೇ ಇರುತ್ತಿತ್ತು. ಒಂದು ದಿನ ಶಾಲೆಯಲ್ಲಿ ಶಿಕ್ಷಕರು ಕೇಳಿದರು, ಸುಂದರ್, ನೀನು ತುಂಬಾ ಬುದ್ಧಿವಂತ. ಮುಂದೇನು ಆಗಬೇಕು ಅಂತ ಯೋಚಿಸಿದ್ದೀಯಾ? ಸುಂದರ್ ಸ್ವಲ್ಪ ತಲೆತಗ್ಗಿಸಿ, ಸರ್ ನಾನು ದೊಡ್ಡ ಅಧಿಕಾರಿ ಆಗಬೇಕು ಆದರೆ ಮನೆಯ ಪರಿಸ್ಥಿತಿ ಎಂದು ನಿಂತುಬಿಟ್ಟ. ಶಿಕ್ಷಕರು ನಗುತ್ತಾ, ಪರಿಸ್ಥಿತಿ ಬದಲಾಯಿಸುವುದಕ್ಕೆ ನೀನೇ ಕಾರಣವಾಗಬೇಕು ಸುಂದರ್, ಎಂದರು. ಆ ಮಾತು ಸುಂದರ್ ಮನಸ್ಸಿನಲ್ಲಿ ಬೆಂಕಿಯಂತೆ ಹೊತ್ತಿಕೊಂಡಿತು. ನಯನಳನ್ನು ಶಾಲೆಯಲ್ಲಿ ಎಲ್ಲರೂ ಇಷ್ಟಪಡುತ್ತಿದ್ದರು. ಅವಳು ತನ್ನ ಸ್ನೇಹಿತರಿಗೆ ಪಾಠ ಹೇಳಿಕೊಡುತ್ತಾ, ನಾನು ಶಿಕ್ಷಕಿ ಆಗ್ತೀನಿ ಎಂದು ಹೇಳುತ್ತಿದ್ದಳು. ಒಂದು ದಿನ ಅವಳು ಮನೆಗೆ ಬಂದು, ಅಪ್ಪ, ನಮ್ಮ ಶಾಲೆಯಲ್ಲಿ ಪುಸ್ತಕಗಳು ಕಡಿಮೆ ಮಕ್ಕಳಿಗೆ ಸಹಾಯ ಮಾಡಬೇಕು, ಎಂದಳು. ಲೋಕಪ್ಪ ಅವಳನ್ನು ನೋಡುತ್ತಾ, ಏನೇ ತಾಯಿ, ಬೇರೆ ಮಕ್ಕಳಿಗೆ ಸಹಾಯ ಮಾಡುವಷ್ಟು ಶಕ್ತಿ ನಮ್ಮ ಹತ್ರ ಎಲ್ಲೈತವ್ವ , ನಿನ್ನ ಮನಸ್ಸು ಒಳ್ಳೆದನ್ನೇ ಬಯಸೈತೆ. ನಿನಗೆ ಒಳ್ಳೇದೆ ಆಗ್ತೈತೆ. ನೀನೇ ಒಂದು ದಿನ ಅವರಿಗೆ ಬೆಳಕಾಗುತ್ತೀಯಾ, ಎಂದನು. ಆದರೆ ಜೀವನ ಸದಾ ಸರಳವಾಗಿರಲಿಲ್ಲ. ಒಂದು ದಿನ ಸಾಲದವರು ಮನೆಗೆ ಬಂದರು. ಲೋಕಪ್ಪ, ನೀನು ತೆಗೆದುಕೊಂಡ ಸಾಲವನ್ನು ಮರಳಿ ಕೊಡಬೇಕು. ಇಲ್ಲದಿದ್ದರೆ ಹೊಲವನ್ನು ಕೊಡಬೇಕು, ಎಂದು ಕಠಿಣವಾಗಿ ಹೇಳಿದರು. ವನಜಮ್ಮ ಬೆಚ್ಚಿಬಿದ್ದಳು. ಲೋಕಪ್ಪ ಕುಸಿದನು. ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವಾಗ ಸುಂದರ್ ಕೋಪದಿಂದ, ಅಪ್ಪ, ನಾನು ಈಗಲೇ ಕೆಲಸಕ್ಕೆ ಹೋಗುತ್ತೇನೆ! ಎಂದನು. ಲೋಕಪ್ಪ ಗಟ್ಟಿಯಾಗಿ, ಇಲ್ಲ! ಮಗಾ, ನೀನು ಓದಬೇಕು. ಇದು ನನ್ನ ಹೋರಾಟ, ಎಂದನು. ಲೋಕಪ್ಪನ ಜೀವನ ಬಿಸಿಲಿನಲ್ಲಿ ಒಣಗುವ ಮಣ್ಣಿನಂತೆ ಕಠಿಣವಾಗಿತ್ತು. ಆದರೂ ಅವನ ಹೃದಯ ಮಾತ್ರ ಮಳೆಯ ಮೊದಲ ಹನಿಯಂತೆ ಮೃದುವಾಗಿತ್ತು. ಆ ದಿನ ರಾತ್ರಿ, ಲೋಕಪ್ಪ ತನ್ನ ತಾಯಿಯಿಂದ ಬಂದಿದ್ದ ಒಂದು ಹಳೆಯ ಚಿನ್ನದ ಉಂಗುರವನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದ. ವನಜಮ್ಮ ಕೇಳಿದಳು, ಅದ್ಯಾಕೆ ಉಂಗ್ರಾನೇ ನೋಡ್ತ ಇದ್ದೀಯಾ? ವನಜಾ......., ಇದನ್ನು ಮಾರಿದರೆ ಸ್ವಲ್ಪ ಸಾಲ ತೀರಬಹುದು ಎಂದನು. ವನಜಮ್ಮ ಕಣ್ಣೀರು ಹಾಕುತ್ತಾ, ಅದು ನಿಮ್ಮ ನೆನಪು ಕಾಣ್ರೀ ...... ಎಂದಳು. ಇಲ್ಲ ವನಜಾ, ನಮ್ಮ ಮಕ್ಕಳ ಭವಿಷ್ಯವೇ ನನ್ನ ನೆನಪು, ಎಂದ ಲೋಕಪ್ಪ. ತಾಯಿಯ ನೆನಪಾಗಿದ್ದ ಉಂಗುರವನ್ನು ಮಾರುವ ತ್ಯಾಗ ಮಾಡಲೇ ಬೇಕಾಯಿತು. ಮಾರನೇ ದಿನ ಲೋಕಪ್ಪ ಉಂಗುರವನ್ನು ಮಾರಿ, ಸಾಲದ ಒಂದು ಭಾಗ ತೀರಿಸಿದನು. ಮನೆಗೆ ಬಂದು, ಇದು ಕೇವಲ ಆರಂಭ. ನಾವು ಗೆಲ್ಲುತ್ತೇವೆ, ಎಂದನು. ಸುಂದರ್ ಅಪ್ಪನ ಆ ಮಾತು ಕೇಳಿ, ತನ್ನೊಳಗೆ ಒಂದು ಸಂಕಲ್ಪ ಮಾಡಿಕೊಂಡನು. ನಾನು ನನ್ನ ತಂದೆಯ ಕನಸನ್ನು ನಿಜ ಮಾಡುತ್ತೇನೆ. ನಯನ ದೀಪ ಹಚ್ಚುತ್ತಾ, ಈ ದೀಪ ನಮ್ಮ ಮನೆಯನ್ನೇ ಅಲ್ಲ ನಮ್ಮ ಹಳ್ಳಿಯನ್ನೇ ಬೆಳಗಬೇಕು, ಎಂದಳು.

ಹೊಸ ತಿರುವು: ಹಳ್ಳಿಯ ಬೆಳಗಿನ ಗಾಳಿ ತಂಪಾಗಿ ಬೀಸುತ್ತಿದೆ. ಆದರೆ ಲೋಕಪ್ಪನ ಮನೆಯೊಳಗಿನ ವಾತಾವರಣ ಬದಲಾಗಿತ್ತು. ಸಂಕಷ್ಟಗಳು ಇದ್ದರೂ, ಮನಸ್ಸಿನಲ್ಲಿ ಒಂದು ಅಚಲವಾದ ವಿಶ್ವಾಸ ಮೂಡಿತ್ತು. ಅದೇ ಸುಂದರ್‌ನ ಹೊಸ ಹೆಜ್ಜೆ. ಸುಂದರ್ ಈಗ ಹೆಚ್ಚು ಶ್ರಮಿಸುತ್ತಿದ್ದ. ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಓದುತ್ತಿದ್ದ. ಒಂದು ದಿನ ಶಾಲೆಯಲ್ಲಿ ಫಲಿತಾಂಶ ಪ್ರಕಟವಾಯಿತು. ಮೊದಲ ಸ್ಥಾನ ಸುಂದರ್! ಎಂದು ಶಿಕ್ಷಕರು ಘೋಷಿಸಿದರು. ಎಲ್ಲರೂ ಚಪ್ಪಾಳೆ ತಟ್ಟಿದರು. ಸುಂದರ್ ಕಣ್ಣಲ್ಲಿ ಕಣ್ಣೀರು ಅವನು ತಕ್ಷಣ ಮನೆಗೆ ಓಡಿದ. ಅಪ್ಪ! ನಾನು ಮೊದಲ ಸ್ಥಾನ ಪಡೆದಿದ್ದೇನೆ! ಎಂದು ಕೂಗಿದ. ಲೋಕಪ್ಪನ ಕಣ್ಣು ತುಂಬಿತು. ಇದು ನನ್ನ ಜಯ ಅಲ್ಲ ಇದು ನಮ್ಮ ಮನೆಯ ಬೆಳಕು, ಎಂದನು. ಸುಂದರನಿಗೆ ಮುಂದೆ ಒಂದು ದೊಡ್ಡ ಅವಕಾಶ ಕಾದಿತ್ತು. ಕೆಲವು ದಿನಗಳ ನಂತರ, ಶಾಲೆಗೆ ಒಂದು ಸುದ್ದಿ ಬಂತು. ಜಿಲ್ಲಾ ಹಂತದಿಂದ ಓದಿನಲ್ಲಿ ಮೇಲುಸ್ತರದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ, ಎಂದು ಮುಖ್ಯಶಿಕ್ಷಕರು ಹೇಳಿದರು. ಸುಂದರ್, ನಮ್ಮ ಶಾಲೆಯಿಂದ ನೀನು ಆಯ್ಕೆಯಾಗಿದ್ದೀಯ, ಎಂದರು. ಸುಂದರ್ ಕ್ಷಣಕಾಲ ಮೌನ. ಅವನಿಗೆ ಸಂತೋಷವೂ ಆಯಿತು ಜೊತೆಜೊತೆಗೆ ಬೇಸರವೂ ಆಯಿತು.. ಅಪ್ಪ-ಅಮ್ಮನನ್ನು ಬಿಟ್ಟು ಹೋಗಬೇಕಾ? ಎಂದು ಆತಂಕವೂ ಆಯಿತು. ಮನೆಯವರೆಲ್ಲಾ ಸೇರಿ ಒಂದು ನಿರ್ಧಾರಕ್ಕೆ ಬಂದರು. ಆ ರಾತ್ರಿ....ವನಜಮ್ಮ ನಿಧಾನವಾಗಿ, ಸುಂದರಾ, ಇದು ನಿನ್ನ ಭವಿಷ್ಯ. ಹೋಗು, ಚೆನ್ನಾಗಿ ಓದಿಕೊಂಡು ಬಾ ಎಂದಳು. ಆಗ ಸುಂದರ್, ಆದರೆ ನಿಮಗೆ ಯಾರೂ ಸಹಾಯ ಮಾಡುವುದಿಲ್ಲ. ಎಂದನು. ಲೋಕಪ್ಪ ನಗುತ,..... ನೀನು ದೊಡ್ಡವನಾಗಿ ನಮಗೆ ಮಾತ್ರ ಅಲ್ಲ, ಇಡೀ ಹಳ್ಳಿಗೇ ಸಹಾಯ ಮಾಡಬೇಕು. ಅಷ್ಟಾದರೆ ಸಾಕು, ಎಂದನು. ಆ ಮಾತು ಸುಂದರ್‌ಗೆ ಧೈರ್ಯ ನೀಡಿತು. ಸುಂದರ್ ಹೊರಟ ದಿನ, ನಯನ ಅಣ್ಣನ ಕೈ ಹಿಡಿದು, ಸುಂದ್ರಣ್ಣ ನೀನು ದೊಡ್ಡವನಾಗಿ ಬಂದು ನಮ್ಮ ಹಳ್ಳಿಯನ್ನು ಬದಲಾಯಿಸಬೇಕು, ಎಂದಳು. ಆಗಲೇ ಸುಂದರ್, ನೀನು ಶಿಕ್ಷಕಿ ಆಗಿ ಮಕ್ಕಳಿಗೆ ಬೆಳಕು ಕೊಡಬೇಕು, ಎಂದನು. ಮಕ್ಕಳ ಮಾತುಗಳನ್ನು ಕೇಳಿಸಿಕೊಳ್ಳುತ್ತಾ, ವನಜಮ್ಮ ಕಣ್ಣೀರನ್ನು ತಡೆದುಕೊಳ್ಳುತ್ತಾ, ಜಾಗ್ರತೆಯಿಂದಿರು ಮಗಾ ಹೋಗಿ ಬಾ ಎಂದಳು. ಲೋಕಪ್ಪ ಅವನ ಬೆನ್ನನ್ನು ತಟ್ಟಿ, ಹೋಗು ನಮ್ಮ ಕನಸುಗಳನ್ನು ನಿಜಮಾಡು, ಎಂದನು. ಸುಂದರ್ ಹೊರಟುಹೋದ ಆ ಮನೆಯ ದೀಪ ಈಗ ದೂರದಲ್ಲಿ ಬೆಳಗಲು ಹೊರಟಿತ್ತು. ಸುಂದರ್ ಓದಲು ಹೋದ ನಂತರ, ಮನೆ ಸ್ವಲ್ಪ ಮೌನವಾಗಿತ್ತು. ನಯನ ಈಗ ಹೆಚ್ಚು ಜವಾಬ್ದಾರಿಯುತಳಾದಳು. ಅವಳು ಓದುವ ಜೊತೆಗೆ ಅಮ್ಮನಿಗೆ ಸಹಾಯ ಮಾಡುತ್ತಿದ್ದಳು. ಆದರೆ ಒಂದು ದಿನಶಾಲೆಯಲ್ಲಿ ಕೆಲವು ಮಕ್ಕಳು ಅವಳನ್ನು ಕೆಣಕಿದರು. ನಿನ್ನ ಅಣ್ಣ ದೊಡ್ಡ ಅಧಿಕಾರಿಯಾಗ್ತಾನಂತೆ ನೀನು ಏನು ಮಾಡ್ತೀಯ? ಎಂದು ಕೇಳಿದರು. ನಯನ ಗಟ್ಟಿಯಾಗಿ, ನಾನು ಶಿಕ್ಷಕಿ ಆಗ್ತೀನಿ. ನಿಮಗೂ ಓದಲು ಕಲಿಸ್ತೀನಿ, ಎಂದಳು. ಅವಳ ಧೈರ್ಯ ಎಲ್ಲರನ್ನೂ ಮೌನಗೊಳಿಸಿತು. ಲೋಕಪ್ಪ ಇನ್ನೂ ಹೆಚ್ಚಾಗಿ ಹೊಲದಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ. ಒಂದು ಸಂಜೆ, ಆಕಾಶದಲ್ಲಿ ಮೋಡಗಳು ಕವಿದವು ಮಳೆ ಸುರಿಯಲು ಶುರುವಾಯಿತು! ಲೋಕಪ್ಪ ಕೈಗಳನ್ನು ಆಕಾಶದ ಕಡೆ ಎತ್ತಿ, ಇದು ದೇವರ ಕೃಪೆ ಎಂದು ಕೈ ಮುಗಿದನು. ವನಜಮ್ಮ ಮತ್ತು ನಯನ ಸಂತೋಷದಿಂದ ಓಡಿಬಂದರು. ಆ ಮಳೆ ಕೇವಲ ಹೊಲವನ್ನೇ ಅಲ್ಲ, ಆ ಮನೆಯ ನಿರೀಕ್ಷೆಗಳನ್ನೂ ತಂಪುಗೊಳಿಸಿತು. ಮಕ್ಕಳಿಗಾಗಿ ಲೋಕಪ್ಪ ಮಾಡಿದ ತ್ಯಾಗ ಮರದ ನೆರಳಿನಂತೆ ಅವರಿಗೆ ರಕ್ಷೆಯಾಗಿತ್ತು. ಹೀಗೆಯೇ ಬದುಕು ಮುಂದುವರೆಯುತ್ತಿದ್ದಂತೆ, ಸುಂದರ್ ನಗರದಲ್ಲಿ ಎದುರಿಸುವ ಹೊಸ ಜೀವನ ಹೇಗಿತ್ತು? ನಯನಾಳ ಜೀವನದಲ್ಲಿ ಎದುರಾದ ದೊಡ್ಡ ಪರೀಕ್ಷೆಯನ್ನು ಹೇಗೆ ಎದುರಿಸಿದಳು. ಹಾಗೆಯೇ ಲೋಕಪ್ಪನ ಕುಟುಂಬಕ್ಕೆ ಬರುವ ಸಂತೋಷದ ಸುದ್ದಿ ಏನು ಎಂಬುದನ್ನೆಲ್ಲಾ ತಿಳಿಯಲು ಕುತೂಹಲವೇ? ಮುಂದೆ ಓದಿ.



ದೂರದಿಂದ ಬಂದ ಬೆಳಕು: ಸುಂದರ್ ನಗರಕ್ಕೆ ಹೋದ ನಂತರ, ಅವನ ಜೀವನ ಸಂಪೂರ್ಣ ಬದಲಾಗಿತ್ತು. ಹೊಸ ಶಾಲೆ, ಹೊಸ ಸ್ನೇಹಿತರು, ಹೊಸ ಸವಾಲುಗಳು. ಆರಂಭದಲ್ಲಿ ಅವನಿಗೆ ಕಷ್ಟವಾಯಿತು. ಆಂಗ್ಲ ಭಾಷೆ, ದೊಡ್ಡ ಪುಸ್ತಕಗಳು, ನಗರ ಜೀವನ ಎಲ್ಲವೂ ಅಜ್ಞಾತ. ಆದರೆ ಅವನಿಗೆ ತಂದೆಯ ಮಾತು ನೆನಪಾಯಿತು. ನೀನು ಬೆಳಕಾಗಬೇಕು. ಸುಂದರ್ ದಿನರಾತ್ರಿ ಹೆಚ್ಚು ಹೆಚ್ಚು ಓದಿನಲ್ಲಿ ಶ್ರಮಿಸುತ್ತಿದ್ದನು, ಅವನ ಪರಿಶ್ರಮ ನಿರಂತರ ಹರಿಯುವ ನದಿಯಂತೆ ನಿಲ್ಲದೆ ಸಾಗುತ್ತಿತ್ತು. ಈತನ ಶ್ರಮದ ವ್ಯಾಸಂಗ ಶಿಕ್ಷಕರಿಗೂ ಇಷ್ಟವಾಯಿತು. ಹೆಚ್ಚುಕಾಲ ಶಿಕ್ಷಕರೊಂದಿಗೆ ವಿಚಾರಗಳನ್ನು ಚರ್ಚಿಸಿ ತಿಳಿದುಕೊಳ್ಳುತ್ತಿದ್ದನು. ಅಪೂರ್ಣತೆಯ ಹಾದಿ ಬಿಟ್ಟು ಸಂಪೂರ್ಣತೆಯ ಕಡೆ ಬರುತ್ತಿದ್ದನು. ಎಷ್ಟೇ ಕಷ್ಟಗಳು ಅವನ ಮುಂದೆ ನಿಂತರೂ, ಅವನು ಪರ್ವತದಂತೆ ಅಚಲವಾಗಿ ಎದುರಿಸುತ್ತಿದ್ದನು. ಶಾಲೆಯಲ್ಲಿ ತನ್ನ ಸ್ಥಾನವನ್ನು ಗಳಿಸಿದನು. ಶಿಕ್ಷಕರು ಅವನ ಪರಿಶ್ರಮವನ್ನು ಮೆಚ್ಚಿದರು. ಅತ್ತ ಹಳ್ಳಿಯಲ್ಲಿ ನಯನ ತನ್ನ ಓದನ್ನು ಮುಂದುವರಿಸುತ್ತಿದ್ದಳು. ಆದರೆ ಒಂದು ದಿನ ವನಜಮ್ಮ ಅಸ್ವಸ್ಥಳಾದಳು. ಮನೆಯ ಜವಾಬ್ದಾರಿ ನಯನಾಳ ಮೇಲಿದೆ. ನಿಭಾಯಿಸಲೇ ಬೇಕಾದ ಅನಿವಾರ್ಯ. ಒಂದು ಕಡೆ ಓದು ಇನ್ನೊಂದು ಕಡೆ ಮನೆ ಕೆಲಸ ಆದರೂ ಅವಳು ಹಿಂದೆ ಸರಿಯಲಿಲ್ಲ. ರಾತ್ರಿ ದೀಪದ ಮುಂದೆ ಕುಳಿತು ಕೊಂಡು ಶ್ರಮಪಟ್ಟು ಓದಿದಳು, ನಯನ ತನ್ನ ಜೀವನದಲ್ಲಿ ಬಂದ ಸವಾಲುಗಳನ್ನು ಗಾಳಿಯನ್ನು ಎದುರಿಸುವ ದೀಪದಂತೆ ಸಹಿಸಿಕೊಂಡಳು. ಅವಳ ಕನಸುಗಳು ಮಾತ್ರ ಆಕಾಶದಲ್ಲಿ ಹಾರುವ ಹಕ್ಕಿಗಳಂತೆ ಎತ್ತರಕ್ಕೆ ಏರಲು ತವಕಿಸುತ್ತಿದ್ದವು. ಆಗಾಗ್ಯೆ ನಾನು ಶಿಕ್ಷಕಿ ಆಗಬೇಕು ಇದು ನನ್ನ ಕನಸು, ಎಂದು ತನ್ನೊಳಗೆ ಹೇಳಿಕೊಳ್ಳುತ್ತಿದ್ದಳು. ಲೋಕಪ್ಪ ಈಗ ಸ್ವಲ್ಪ ನೆಮ್ಮದಿಯಾಗಿದ್ದನು. ಮಳೆಯ ಕಾರಣದಿಂದ ಬೆಳೆ ಚೆನ್ನಾಗಿ ಬಂದಿತ್ತು. ಆದರೆ ಅವನು ಇನ್ನೂ ಕಷ್ಟಪಡುತ್ತಿದ್ದ. ಮಕ್ಕಳ ಭವಿಷ್ಯವೇ ನನ್ನ ಸಂಪತ್ತು, ಎಂದು ಮತ್ತೆ ಮತ್ತೆ ಹೇಳುತ್ತಿದ್ದ.

ಕೆಲವು ವರ್ಷಗಳ ನಂತರ: ಕೆಲವು ವರ್ಷಗಳ ನಂತರ ಒಂದು ದಿನ ಪತ್ರ ಬಂತು. ಸುಂದರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಸರ್ಕಾರದ ದೊಡ್ಡ ಹುದ್ದೆಗೆ ಆಯ್ಕೆಯಾಗಿದ್ದ! ಕೊನೆಗೆ, ಅವನ ಸಾಧನೆ ಬೆಳಗಿನ ಸೂರ್ಯೋದಯದಂತೆ ಪ್ರಕಾಶಿಸಿತು. ತಾನಂದುಕೊಂಡಂತೆ ದೊಡ್ಡ ಅಧಿಕಾರಿಯೂ ಆದನು. ಲೋಕಪ್ಪನ ಕೈಗಳು ನಡುಗಿದವು. ವನಜಮ್ಮ ಕಣ್ಣೀರು ಹಾಕಿದಳು. ಲೋಕಪ್ಪ, ಇನ್ನೇಕೆ ವನಜಾ ಕಣ್ಣೀರು ನಮ್ಮ ಮಗ ಸಾಧಿಸಿದ್ದಾನೆ! ಎಂದು ಅವರು ಸಂತೋಷಪಟ್ಟರು. ಅದೇ ಸಮಯದಲ್ಲಿ, ನಯನ ತನ್ನ ಓದನ್ನು ಪೂರ್ಣಗೊಳಿಸಿ, ಶಿಕ್ಷಕಿ ಆಗಿದ್ದಳು. ಅವಳು ಶಿಕ್ಷಕಿ ಆದ ದಿನ, ಅವಳ ಮುಖದ ನಗು ಚಂದ್ರನ ಬೆಳಕಿನಂತೆ ಶಾಂತವಾಗಿ ಹರಡಿತ್ತು. ಅವಳು ತನ್ನದೇ ಹಳ್ಳಿಯಲ್ಲಿ ಕೆಲಸಕ್ಕೆ ಸೇರಿದ್ದಳು. ಮಕ್ಕಳಿಗೆ ಪಾಠ ಹೇಳುತ್ತಾ, ಓದು ನಿಮ್ಮ ಜೀವನವನ್ನು ಬದಲಾಯಿಸುತ್ತದೆ, ಎಂದು ಹೇಳುತ್ತಿದ್ದಳು. ಒಂದು ದಿನಸುಂದರ್ ಮನೆಗೆ ಬಂದನು. ಹಳ್ಳಿ ಜನರೆಲ್ಲ ಸೇರಿದ್ದರು. ಲೋಕಪ್ಪನ ಮಗ ದೊಡ್ಡ ಅಧಿಕಾರಿ ಆಗಿದ್ದಾನೆ! ಎಂದು ಎಲ್ಲರೂ ಹೆಮ್ಮೆಪಟ್ಟರು. ಸುಂದರ್ ತನ್ನ ತಂದೆಯ ಮುಂದೆ ತಲೆ ಬಾಗಿ, ಇದು ನಿಮ್ಮ ತ್ಯಾಗದ ಫಲ, ಎಂದನು.

ಲೋಕಪ್ಪ ಕಣ್ಣೀರಿನಿಂದ, ಮಗಾ.... ನೀನೇ ನಮ್ಮ ಮನೆಯ ದೀಪ, ಎಂದನು. ಕೆಲವು ತಿಂಗಳುಗಳ ನಂತರ, ಸುಂದರ್ ಮತ್ತು ನಯನ ಸೇರಿ ಹಳ್ಳಿಯಲ್ಲಿ ಒಂದು ಶಾಲೆಯನ್ನು ನಿರ್ಮಿಸಿದರು. ಹೊಸ ಶಾಲೆ ನಿರ್ಮಾಣವಾದಾಗ, ಅದು ಕತ್ತಲೆಯ ಮಧ್ಯೆ ಬೆಳಗುವ ದೀಪದಂತೆ ಹಳ್ಳಿಯನ್ನೇ ಬೆಳಗಿಸಿತು. ಆ ಶಾಲೆಗೆ ಮನೆ ಮನಗಳ ಬೆಳಗುವ ದೀಪ ಎಂದು ಹೆಸರಿಟ್ಟರು. ಮಕ್ಕಳ ನಗು ಹೂವಿನ ಸುಗಂಧದಂತೆ ಎಲ್ಲೆಡೆ ಹರಡಿತು. ಲೋಕಪ್ಪನ ಮನೆಯ ಬೆಳಕು ಸೂರ್ಯನ ಕಿರಣಗಳಂತೆ ಹಳ್ಳಿಯ ಪ್ರತೀ ಮನವನ್ನೂ ಬೆಳಗಿಸಿತು. ಲೋಕಪ್ಪ ಮತ್ತು ವನಜಮ್ಮ ಆ ಶಾಲೆಯ ಮುಂದೆ ನಿಂತು, ನೋಡೇ ವನಜಾ, ಒಂದು ಸಣ್ಣ ದೀಪ ನಕ್ಷತ್ರದಂತೆ ಚಿಕ್ಕದಾದರೂ, ಅದಕ್ಕೆ ಕತ್ತಲೆಯನ್ನು ಓಡಿಸುವ ಶಕ್ತಿ ಹೊಂದಿದೆ. ಆ ಒಂದು ದೀಪ ಮನೆಯಲ್ಲೇ ಬೆಳಗಿದರೂ, ಅದು ಒಂದು ಹಳ್ಳಿಯನ್ನೇ ಬೆಳಗಿಸಬಹುದು. ಎಂದು ತಮ್ಮ ಮಕ್ಕಳ ಸಾಧನೆಯನ್ನು ನೋಡುತ್ತಾ ನಿಂತರು.

– **ಕೆ.ಎನ್. ಚಿದಾನಂದ** (ನಾನಂಚಿ) ಹಾಸನ

ಸೆಲ್ಫಿ ಸಂಸ್ಕೃತಿ ಮತ್ತು ಆನೆಗಳ ಸಿಟ್ಟು: ಎಚ್ಚರವಾಗಬೇಕಾದ ಸಮಯ

ಕರ್ನಾಟಕದ ದುಬಾರೆ ಆನೆ ಶಿಬಿರದಲ್ಲಿ ಇತ್ತೀಚೆಗೆ ಸಂಭವಿಸಿದ ದುರಂತ ಘಟನೆ ಕೇವಲ ಒಂದು ಅಘಾತವಲ್ಲ, ಅದು ನಮ್ಮ ಸಮಾಜದಲ್ಲಿ ಹೆಚ್ಚುತ್ತಿರುವ ನಿರ್ಲಕ್ಷ್ಯ ಮನೋಭಾವ ಮತ್ತು ಸಾಮಾಜಿಕ ಜಾಲತಾಣಗಳ ಪ್ರದರ್ಶನ ಸಂಸ್ಕೃತಿಯ ಅಪಾಯಕಾರಿ ಮುಖವನ್ನೇ ಬಯಲಿಗೆಳೆದಿದೆ. ಎರಡು ಆನೆಗಳ ನಡುವಿನ ಘರ್ಷಣೆಯ ಸಂದರ್ಭದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿರುವುದು ವಿಷಾದನೀಯ. ಆದರೆ ಈ ಘಟನೆಗೆ ಕಾರಣವಾದ ಪರಿಸ್ಥಿತಿಯನ್ನು ಗಮನಿಸಿದರೆ, ಕಾಡುಪ್ರಾಣಿಗಳ ಅಪಾಯವನ್ನು ಲಘುವಾಗಿ ಪರಿಗಣಿಸುವ ಪ್ರವೃತ್ತಿಯೇ ಆತಂಕವಾಗಿ ಕಾಣುತ್ತದೆ.

ಹಾಸನ ಜಿಲ್ಲೆ ಸೇರಿದಂತೆ ಮಲೆನಾಡಿನ ಹಲವು ಭಾಗಗಳಲ್ಲಿ ಆನೆಮಾನವ ಸಂಘರ್ಷ ಹೊಸದೇನಲ್ಲ. ಕಳೆದ ಹಲವು ದಶಕಗಳಿಂದ ಕಾಡಿನಲ್ಲಿ ಇರಬೇಕಾದ ಆನೆಗಳು ಕಾಫಿ ತೋಟಗಳು, ಗ್ರಾಮ ಹಾಗು ಜನವಸತಿ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಅರಣ್ಯ ಪ್ರದೇಶಗಳ ಕುಂಠಿತತೆ, ಆಹಾರದ ಕೊರತೆ ಮತ್ತು ಮಾನವ ಅತಿಕ್ರಮಣದಿಂದ ಆನೆಗಳು ನಾಡಿನತ್ತ ಬರುತ್ತಿವೆ. ಈ ಪರಿಸ್ಥಿತಿ ಈಗ ಸ್ಥಳೀಯರ ದೈನಂದಿನ ಬದುಕಿನ ಭಾಗವಾಗಿಬಿಟ್ಟಿದೆ. ಆದರೆ ಈ ಗಂಭೀರ ಸಮಸ್ಯೆಯನ್ನು ಕೆಲವರು ಮನರಂಜನೆಯಾಗಿ ಪರಿವರ್ತಿಸಿಕೊಂಡಿರುವುದು ಅತ್ಯಂತ ಕಳವಳಕಾರಿ ಬೆಳವಣಿಗೆ.

ಆನೆ ಕಂಡ ತಕ್ಷಣವೇ ಅತೀ ಸಮೀಪಕ್ಕೆ ಹೋಗಿ ಸೆಲ್ಫಿ ತೆಗೆದುಕೊಳ್ಳುವುದು, ವಿಡಿಯೋ ಮಾಡುವುದು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಇಂದು ಒಂದು ಅಪಾಯಕಾರಿ ಟ್ರೆಂಡ್ ಆಗಿದೆ. ಕೆಲವರು ವೈಲ್ಡ್ ಲೈಫ್ ವ್ಲಾಗರ್ ಅಥವಾ ಬ್ಲಾಗರ್ ಹೆಸರಿನಲ್ಲಿ ಆನೆಗಳ ಹಿಂದೆ ಹತ್ತಿರ ಹತ್ತಿರ ಹೋಗಿ ಚಿತ್ರೀಕರಣ ಮಾಡುತ್ತಿದ್ದಾರೆ. ಇನ್ನೂ ಕೆಲವರು ಪ್ರಸಿದ್ಧಿ ಮತ್ತು ವೀಕ್ಷಣೆಗಾಗಿ ಜೀವದ ಹಂಗನ್ನೇ ತೊರೆದು ಸಾಹಸ ಪ್ರದರ್ಶನಕ್ಕೆ ಮುಂದಾಗುತ್ತಿದ್ದಾರೆ. ಇದು ಕೇವಲ ಅವರ ಜೀವಕ್ಕಷ್ಟೇ ಅಲ್ಲ, ಸುತ್ತಮುತ್ತಲಿನ ಸಾರ್ವಜನಿಕರ ಜೀವಕ್ಕೂ ಅಪಾಯ ಉಂಟುಮಾಡುವ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದೆ.

ಈ ಬಗ್ಗೆ ಹಾಸನ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಸೌರವ್ ಕುಮಾರ್ ಅವರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ. ಕೆಲವರು ಆನೆಗಳ ಚಲನವಲನದ ಹಿಂದೆ ಅಪಾಯಕಾರಿ ರೀತಿಯಲ್ಲಿ ಹೋಗುತ್ತಿದ್ದಾರೆ. ಇದು ಜೀವಕ್ಕೆ ಅಪಾಯಕಾರಿಯಾದ ಪ್ರವೃತ್ತಿ ಎಂಬ ಅವರ ಹೇಳಿಕೆ ಪರಿಸ್ಥಿತಿಯ ಗಂಭೀರತೆಯನ್ನು ಸ್ಪಷ್ಟಪಡಿಸುತ್ತದೆ. ಅರಣ್ಯ ಇಲಾಖೆಯ ಸೂಚನೆಗಳನ್ನು ನಿರ್ಲಕ್ಷಿಸುವುದು ಕೇವಲ ನಿಯಮ ಉಲ್ಲಂಘನೆ ಅಲ್ಲ; ಅದು ಜೀವದೊಂದಿಗೆ ಆಟವಾಡುವಂತಾಗಿದೆ.

ಹಾಸನ ಜಿಲ್ಲೆಯ ಜನರಿಗೆ ಭೀಮ ಎಂಬ ಆನೆ ಚಿರಪರಿಚಿತ. ಸಾಧುಸ್ವಭಾವದ ಆನೆ ಎಂದು ಹೇಳಲಾಗುವ ಭೀಮನ ಬಗ್ಗೆ ಜನರಲ್ಲಿ ಭಯಕ್ಕಿಂತ ಹೆಚ್ಚು ಆತ್ಮೀಯತೆಯೇ ಇದೆ. ಆದರೆ ಕಾಡುಪ್ರಾಣಿಗಳ ವರ್ತನೆಯನ್ನು ಸಂಪೂರ್ಣವಾಗಿ ಊಹಿಸಲು ಸಾಧ್ಯವಿಲ್ಲ. ಶಾಂತವಾಗಿರುವ ಆನೆಯೂ ಒಂದು ಕ್ಷಣದಲ್ಲಿ ಆಕ್ರೋಶಕ್ಕೆ ಒಳಗಾಗಬಹುದು. ಕಳೆದ ಎರಡು ವರ್ಷಗಳ ಹಿಂದೆ ಶಾರ್ಪ್ ಶೂಟರ್ ವೆಂಕಟೇಶ್ ಅವರ ಮೇಲಿನ ದಾಳಿಯ ಘಟನೆ ಇದಕ್ಕೆ ಸ್ಪಷ್ಟ ಉದಾಹರಣೆ. ಈ ಆನೆ ಏನೂ ಮಾಡುವುದಿಲ್ಲ ಎಂಬ ಭ್ರಮೆಯೇ ಅನೇಕ ಅಪಾಯಗಳಿಗೆ ಕಾರಣವಾಗುತ್ತಿದೆ.

ಆನೆಗಳು ಮೂಲತಃ ಕಾಡುಪ್ರಾಣಿಗಳು. ಅವುಗಳನ್ನು ಎಷ್ಟೇ ಸಾಕಿದರೂ, ತರಬೇತಿ ನೀಡಿದರೂ ಅವುಗಳ ಸಹಜ ಸ್ವಭಾವವನ್ನು ಸಂಪೂರ್ಣವಾಗಿ ಬದಲಾಯಿಸಲು ಸಾಧ್ಯವಿಲ್ಲ. ವಿಶೇಷವಾಗಿ ಬಂಧನದಲ್ಲಿರುವ ಅಥವಾ ಮಾನವ ಸಂಪರ್ಕ ಹೆಚ್ಚಿರುವ ಆನೆಗಳಲ್ಲಿ ಮಾನಸಿಕ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವೊಮ್ಮೆ ಸಣ್ಣ ಉದ್ವಿಗ್ನತೆಯೇ ದೊಡ್ಡ ಆಕ್ರೋಶಕ್ಕೆ ಕಾರಣವಾಗಬಹುದು.

ಕಾಡಿನಲ್ಲಿ ಎರಡು ಆನೆಗಳ ನಡುವೆ ಕಾದಾಟ ಉಂಟಾದರೆ, ಅವು ಪರಸ್ಪರ ದೂರ ಸರಿದು ತಪ್ಪಿಸಿಕೊಳ್ಳುವಷ್ಟು ವಿಶಾಲವಾದ ಜಾಗ ಇರುತ್ತದೆ. ಕೋಪ ಕಡಿಮೆಯಾಗಲು ಮತ್ತು ಘರ್ಷಣೆ ತಗ್ಗಲು ಸಹಜ ಪರಿಸರ ಸಹಕಾರಿಯಾಗುತ್ತದೆ. ಆದರೆ ಆನೆ ಶಿಬಿರಗಳಲ್ಲಿ ಅಥವಾ ಸೀಮಿತ ಪ್ರದೇಶಗಳಲ್ಲಿ ಆ ಅವಕಾಶ ಇರುವುದಿಲ್ಲ. ಒಂದು ಆನೆ ಮತ್ತೊಂದು ಆನೆಯಿಂದ ದೂರ ಹೋಗಲು ಸಾಧ್ಯವಾಗದೆ ಒತ್ತಡ ಮತ್ತಷ್ಟು ಹೆಚ್ಚಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಆನೆಗಳ ಆಕ್ರೋಶ ತೀವ್ರಗೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಇದೇ ಕಾರಣಕ್ಕೆ ಶಿಬಿರ ಪ್ರದೇಶಗಳಲ್ಲಿ ಜನರು ಅತ್ಯಂತ ಎಚ್ಚರಿಕೆಯಿಂದ ವರ್ತಿಸುವುದು ಅಗತ್ಯ.

ಆದರೂ ಕೆಲವರು ಆನೆಗಳ ಸಮೀಪಕ್ಕೆ ಹೋಗಿ ಸಾಹಸ ಪ್ರದರ್ಶನ ಮಾಡುವುದನ್ನು ಧೈರ್ಯವೆಂದು ಭಾವಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಕ್ಷಣಗಳ ಮೆಚ್ಚುಗೆಗಾಗಿ ಜೀವವನ್ನು ಪಣಕ್ಕಿಡುವ ಪ್ರವೃತ್ತಿ ಆತಂಕಕಾರಿ. ಒಂದು ವೈರಲ್ ವಿಡಿಯೋ ಅಥವಾ ಸೆಲ್ಫಿಗಿಂತ ಮಾನವ ಜೀವದ ಮೌಲ್ಯ ದೊಡ್ಡದು ಎಂಬ ಅರಿವು ಸಮಾಜದಲ್ಲಿ ಮೂಡಬೇಕಿದೆ.

ಕಾಡುಪ್ರಾಣಿಗಳನ್ನು ಪ್ರೀತಿಸುವುದು ತಪ್ಪಲ್ಲ; ಆದರೆ ಆ ಪ್ರೀತಿ ಜವಾಬ್ದಾರಿಯುತವಾಗಿರಬೇಕು. ಸುರಕ್ಷಿತ ಅಂತರ ಕಾಯ್ದುಕೊಳ್ಳುವುದು, ಅರಣ್ಯ ಇಲಾಖೆಯ ಸೂಚನೆಗಳನ್ನು ಪಾಲಿಸುವುದು ಮತ್ತು ಕಾಡುಪ್ರಾಣಿಗಳ ಸ್ವಭಾವವನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ.

ಪ್ರಕೃತಿಯೊಂದಿಗೆ ಸಹಜ ಸಹಬಾಳ್ವೆ ಎಂದರೆ ಅಪಾಯದ ಅಂಚಿಗೆ ಹೋಗುವುದು ಅಲ್ಲ; ಮಿತಿಯನ್ನು ಅರಿತು ವರ್ತಿಸುವುದು. ದುಬಾರೆ ದುರಂತ ಮತ್ತೊಂದು ಜೀವ ಹಾನಿಯಾಗುವ ಮೊದಲು ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಬೇಕು. ಒಂದು ಸೆಲ್ಫಿ ಮರೆತುಹೋಗಬಹುದು. ಆದರೆ ಕಳೆದುಹೋದ ಜೀವವನ್ನು ಮರಳಿ ತರಲು ಸಾಧ್ಯವಿಲ್ಲ.

– **ಅಲೀಲ್ ಅಕ್ಬರ್,** ಸಕಲೇಶಪುರ



ಹೆಸರಿಲ್ಲದ ಊರು

ಅಲ್ಲೊಂದು ಊರಿದೆ. ಮೊದಲದು ಊರಾಗಿರಲಿಲ್ಲ. ದೂರದೂರದ ಬೇರೆಬೇರೆ ಜನ ದುಡಿಮೆಯ ನಂಬಿ ಇಲ್ಲಿಗೆ ಬಂದು ನಿಂತ ಮೇಲೆ ಈಗ ಅದು ಊರಾಗಿ ಜನವಸತಿಯ ಸ್ಥಳವಾಗಿ ಮಾರ್ಪಾಡಾಗಿದೆ. ನಮಗೆಲ್ಲರಿಗೂ ಹೆಸರಿದೆ, ಅದಕ್ಕೊಂದಿಷ್ಟು ಪದವಿಗಳು, ಸಾಧನೆಗಳು, ಜೊತೆಗೆ ಜನರ ಬಾಯಲ್ಲಿ ಆಗಾಗ ಹರಿದಾಡುತ್ತದೆ ನಮ್ಮ ಹೆಸರು. ಆದರೆ ಆ ಊರಿನ ಜನರಿಗೆ ಹೆಸರು ಇಲ್ಲವೇನೋ ಅನ್ನುವ ಜೀವನ ಅವರದು. ದೊಡ್ಡ ಕಟ್ಟಡದ ಕೆಲಸದಲ್ಲಿ ಸಣ್ಣ ಜಲ್ಲಿಗಳನ್ನು ಸುರಿಯುವುದು, ದೊಡ್ಡ ಕಲ್ಲುಗಳನ್ನು ಎತ್ತಿ ಜೋಡಿಸುವುದು, ಸಿಮೆಂಟು ಹೊರುವುದು, ಯಾವುದೋ ರಸ್ತೆಗೆ ಡಾಂಬರು ಸುರಿಯೋದು, ಇನ್ನೊಂದಷ್ಟು ಮೂಟೆ ಎತ್ತೋದು, ಯಾವುದೋ ಚರಂಡಿ ಸ್ವಚ್ಛಮಾಡುವುದು, ಕಸ ಎತ್ತುವುದು ಹೀಗೆ



ಕೆಲಸಗಳು ಸಾಗುತ್ತವೆ. ಅವರನ್ನು ಯಾವ ಹೆಸರಿನಿಂದ ಕರೆದರೂ ಈ ಹೆಸರು ನನ್ನದಲ್ಲ ಇದೇ ಹೆಸರಿನಿಂದ ಕರೆಯಿರಿ ಅಂತ ಅವರು ಹೇಳುವುದಿಲ್ಲ. ಅವರಿಗೆ ಹೆಸರು ಮುಖ್ಯವಾಗುವುದಿಲ್ಲ. ದುಡಿಮೆ ಒಂದೇ ದೊಡ್ಡದು. ದೊಡ್ಡ ದೊಡ್ಡ ಮನೆ ಕಟ್ಟುತ್ತಾ ಒಮ್ಮೆ ಬೆರಗಿನಿಂದ ನಿಂತು ನೋಡಿ ಕೆಲಸ ಮುಂದುವರೆಸುತ್ತಾರೆ. ಅವರಿಗೆ ಅವರ ಕೆಲಸದಲ್ಲಿ ಯಾವ ತಪ್ಪುಗಳಾಗಬಾರದು ಅನ್ನುವ ಎಚ್ಚರಿಕೆಯಿದೆ. ಇಲ್ಲಿಯ ಸಿಮೆಂಟಿನ ಧೂಳು ಪಕ್ಕದ ಮನೆಯವನಿಗೆ ಏನು ತೊಂದರೆ ಕೊಡುತ್ತಿದೆ, ಯಾವ ಪರಿಸರಕ್ಕೆ ಹಾನಿಯಾಗುತ್ತಿದೆ ಅನ್ನೋದು ಅವಶ್ಯವೇ ಅಲ್ಲ. ಇವರಿಗೆ ಹೆಸರಿಲ್ಲ, ಹೆಸರಿಗಾಗಿ ಹೋರಾಟ ನಡೆಸಿಲ್ಲ, ಹೆಸರನ್ನು ಯಾರಾದರೂ ಕೂಗಲಿ ಅನ್ನುವ ನಡವಳಿಕೆಯೂ ಇಲ್ಲ. ಅಂತಹ ಹೆಸರಿಲ್ಲದ ಜನರಿಂದಲೇ ಊರಲ್ಲಿ ಹೆಸರಿರುವವರು ಬದುಕಿದ್ದಾರೆ.

ಹೆಸರಿಲ್ಲದ ಊರು ಈಗ ಹೆಸರಿಲ್ಲದ ಊರು ಎಂದು ನಾಮಾಂಕಿತವಾಗಿದೆ. ಅಲ್ಲಿ ಕೆಲಸಗಳು ಮಾತ್ರ ನಡೆಯುತ್ತದೆ.

– **ಧೀರಜ್** ಬೆಳ್ಳಾರೆ

» **ಆನೆ ಶಿಬಿರಗಳಲ್ಲಿ ಮದ ಗಜಗಳ ಕಾದಾಟ ಮತ್ತು ಸಾವು ಹೊಸದೇನಲ್ಲ. ಹಿಂದೆ ಬಿಆರ್‌ಟಿ ವ್ಯಾಪ್ತಿಯ ಕೆ.ಗುಡಿ ಅರಣ್ಯ ಶಿಬಿರದಲ್ಲಿ ಮದವೇರಿದ ಗಜೇಂದ್ರ, ಹೆಸರಿನ ಆನೆಯು ಶ್ರೀರಾಮ ಹೆಸರಿನ ಆನೆಯನ್ನು ತಿವಿದು ಸಾಯಿಸಿತ್ತು. ಇವೆರಡೂ ದಸರೆಯಲ್ಲಿ ಜತೆಯಾಗಿ ಹೆಜ್ಜೆ ಹಾಕಿದ್ದ ಆನೆಗಳಾಗಿದ್ದವು. ದಸರೆ ಆನೆಗಳು ಸೇರಿ ಸಾಕಾನೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ ನಾಗರಹೊಳೆ ವ್ಯಾಪ್ತಿಯ ಮತ್ತಿಗೋಡು ಆನೆ ಶಿಬಿರದಲ್ಲಿ ಇಂತಹ ಕಾದಾಟಗಳು ಹಲವು ಬಾರಿ ನಡೆದಿವೆ. ಭೀಮನಕಟ್ಟೆ ಶಿಬಿರದಲ್ಲಿ ಅಂಬಾರಿ ಹೊತ್ತು ಸಾಗಿದ್ದ ಬಲರಾಮ ಆನೆ ತನ್ನ ವೃದ್ಧಾಪ್ಯದಲ್ಲಿ ಮತ್ತೊಂದು ಆನೆಯ ದಾಳಿಗೆ ಗುರಿಯಾಗಿದ್ದ. ಆದರೆ ಈ ಕಾದಾಟದಲ್ಲಿ ಪ್ರವಾಸಿ ಮಹಿಳೆಯೊಬ್ಬರು ಬಲಿಯಾಗಿರುವುದು ದುರದೃಷ್ಟಕರ.**

ದುಬಾ(ರಿ)ರೆ ಪಾಠ: ಪ್ರಾಣಿಗಳ ಪ್ರೀತಿಗಿರಲಿ ಜೀವದ ಅಂತರ!

ಲೋಕಮತ ನಾಗರಹಾವು, ಕಾಳಿಂಗ ಸರ್ಪವನ್ನು ಹಿಡಿದು ಬಳಿಕ ಅದರೊಂದಿಗೆ ಸರಸವಾಡುವ ಕೆಲವು ರೀಲ್ಸ್‌ಗಳನ್ನು ನಾವು ಆಗಾಗ ಇನ್‌ಸ್ಟಾ ಗ್ರಾಂ, ಫೇಸ್‌ಬುಕ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತೇವೆ. ಕೆಲವರು ನಾಗರಹಾವಿಗೆ, ಕಾಳಿಂಗ ಸರ್ಪಕ್ಕೆ ಮುತ್ತಿಕ್ಕುವ ಸಾಹಸವನ್ನೂ ಪ್ರದರ್ಶಿಸುತ್ತಾರೆ. ಇಂತಹ ಹುಚ್ಚು ಪ್ರಯತ್ನದಲ್ಲಿ ತಮ್ಮ ಗೋರಿಯನ್ನು ತಾವೇ ತೋಡಿಕೊಂಡವರಿದ್ದಾರೆ. ಸಾಮಾಜಿಕ ಜಾಲತಾಣಗಳ ಈ ಯುಗದಲ್ಲಿ ಕೆಲವರು ತಮ್ಮ ದಿನಚರಿಯ ಪ್ರತಿಯೊಂದು ಕ್ಷಣವೂ ಕ್ಯಾಮೆರಾ ಕಣ್ಣುಗಳಲ್ಲಿ ಸೆರೆಯಾಗಬೇಕೆಂದು ಬಯಸುತ್ತಾರೆ. ಇದು ಜಾಲತಾಣಗಳ ವ್ಯಸನ ಅಥವಾ ಗೀಳು ಇರಬಹುದು. ಆದರೆ ಬೆಳಿಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೆ ಪ್ರತಿಯೊಂದನ್ನೂ ಜಗತ್ತಿಗೆ ಸಾರುವ ತವಕದಲ್ಲಿ ನಾವು ಹಲವು ಸೂಕ್ಷ್ಮತೆಗಳನ್ನು ಮರೆಯುತ್ತಿದ್ದೇವೆ. ಇವುಗಳಲ್ಲಿ ಅತ್ಯಂತ ಆತಂಕಕಾರಿ ಮತ್ತು ಅಪಾಯಕಾರಿ ಪ್ರವೃತ್ತಿ ಎಂದರೆ ಅದು ಪ್ರಾಣಿ ಗಳೊಂದಿಗಿನ ಸೆಲ್ಫಿ ಕ್ರೇಜ್ ಅಥವಾ ತೋರಿಕೆಯ ಪ್ರೀತಿ.

ಮೂಕಪ್ರಾಣಿಗಳ ಜೊತೆಗಿನ ಒಡನಾಟ, ಅವುಗಳ ಮೇಲಿನ ಪ್ರೀತಿ ನಮ್ಮ ಮಾನವೀಯ ಗುಣದ ಪ್ರತೀಕ ಎನ್ನುವುದರಲ್ಲಿ ಎರಡು ಮಾತಿಲ್ಲ, ಆದರೆ, ಈ ಪ್ರೀತಿ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡಲು, ಹತ್ತಾರು ಲೈಕ್ ಗಿಟ್ಟಿಸಿಕೊಳ್ಳಲು ಮಾತ್ರ ಸೀಮಿತವಾದರೆ ಮತ್ತು ಪ್ರಾಣಿಗಳ ಹಾಗೂ ಮನುಷ್ಯರ ಜೀವಕ್ಕೇ ಕುತ್ತು ತರುವಂತಾದರೆ, ಅದನ್ನು ಪ್ರೀತಿ ಎನ್ನಲಾಗದು. ಪರೋಕ್ಷವಾಗಿ ಇದು ಪ್ರೀತಿಯ ಹೆಸರಿನಲ್ಲಿ ನಡೆಸುವ ಕ್ರೌರ್ಯ.

ಕೊಡಗಿನ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ನಡುವೆ ಸಿಲುಕಿ ತಮಿಳು ನಾಡಿನ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಕೇವಲ ಆಕಸ್ಮಿಕ ದುರಂತವಲ್ಲ; ಇದು ವನ್ಯಜೀವಿಗಳ ನೈಜ ಪ್ರಕೃತಿಯನ್ನು ಮರೆತು, ಅವುಗಳನ್ನು ಕೇವಲ ಪ್ರವಾಸಿ ಆಕರ್ಷಣೆಯ ವಸ್ತುಗಳನ್ನಾಗಿ ನೋಡಿದ ನಮ್ಮ ಬೇಜವಾಬ್ದಾರಿತನಕ್ಕೆ ಸಿಕ್ಕ ಪ್ರತಿಫಲ. ದುಬಾರೆಯಲ್ಲಿ ನಡೆದ ಘಟನೆಯನ್ನು ಗಮನಿಸಿದರೆ, ದಸರೆಯಲ್ಲಿ ಭಾಗವಹಿಸುವ ಕಂಜನ್ ಹೆಸರಿನ ಸಾಕಾನೆ, ಮಾರ್ತಾಂಡ ಹೆಸರಿನ ಮಖ್ನಾ (ದಂತವಿಲ್ಲದ) ಆನೆಯ ಮೇಲೆ ಒಮ್ಮಿಂದೊಮ್ಮೆಲೆ ದಾಳಿ ಮಾಡಿ ದಂತದಿಂದ ತಿವಿದು ಸಾಯಿಸಿತು. ಈ ಭೀಕರ ಕಾದಾಟದ ಮಧ್ಯೆ ಸಿಲುಕಿದ ಪ್ರವಾಸಿ ಮಹಿಳೆ ಪ್ರಾಣ ಕಳೆದುಕೊಂಡರು.

ಮೇಲ್ನೋಟಕ್ಕೆ ಇದು ಆಕಸ್ಮಿಕ. ಆದರೆ ಆನೆ ಶಿಬಿರಗಳಲ್ಲಿ ಮದ ಗಜಗಳ ಕಾದಾಟ ಮತ್ತು ಸಾವು ಹೊಸದೇನಲ್ಲ. ಹಿಂದೆ ಬಿಆರ್‌ಟಿ ವ್ಯಾಪ್ತಿಯ ಕೆ.ಗುಡಿ ಅರಣ್ಯ ಶಿಬಿರದಲ್ಲಿ ಮದವೇರಿದ ಗಜೇಂದ್ರ, ಹೆಸರಿನ ಆನೆಯು ಶ್ರೀರಾಮ ಹೆಸರಿನ ಆನೆಯನ್ನು ತಿವಿದು ಸಾಯಿಸಿತ್ತು. ಇವೆರಡೂ ದಸರೆಯಲ್ಲಿ ಜತೆಯಾಗಿ ಹೆಜ್ಜೆ ಹಾಕಿದ್ದ ಆನೆಗಳಾಗಿದ್ದವು. ದಸರೆ ಆನೆಗಳು ಸೇರಿ ಸಾಕಾನೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ ನಾಗರಹೊಳೆ ವ್ಯಾಪ್ತಿಯ ಮತ್ತಿಗೋಡು ಆನೆ ಶಿಬಿರದಲ್ಲಿ ಇಂತಹ ಕಾದಾಟಗಳು ಹಲವು ಬಾರಿ ನಡೆದಿವೆ. ಭೀಮನಕಟ್ಟೆ ಶಿಬಿರದಲ್ಲಿ ಅಂಬಾರಿ ಹೊತ್ತು ಸಾಗಿದ್ದ ಬಲರಾಮ ಆನೆ ತನ್ನ ವೃದ್ಧಾಪ್ಯದಲ್ಲಿ ಮತ್ತೊಂದು ಆನೆಯ ದಾಳಿಗೆ ಗುರಿಯಾಗಿದ್ದ.

ಈಗ ಖಳನಾಯಕನ ಪಟ್ಟ ಗಿಟ್ಟಿಸಿಕೊಂಡಿರುವ ಕಂಜನ್ ಆನೆ ಕೂಡ ಹಿಂದೆ ಪ್ರಶಾಂತ್ ಎಂಬ ಇನ್ನೊಂದು ದಸರಾ ಆನೆಯ ದಾಳಿಗೆ ಗುರಿಯಾಗಿದ್ದ. 2024ರ ದಸರೆಯ ವೇಳೆ ಮೈಸೂರು ಅರಮನೆಯ ಆರವರಣದಲ್ಲಿಯೇ ಕಂಜನ್ ಮೇಲೆ ಧನಂಜಯ ಹೆಸರಿನ ಆನೆ ದಾಳಿ ಮಾಡಿತ್ತು. ಹೆದರಿದ ಕಂಜನ್ ನೂರಾರು ಜನರ ಮಧ್ಯೆ ಓಡುತ್ತಾ ಅರಮನೆ ಗೇಟ್ ದಾಟಿ ನೇರವಾಗಿ ವಾಹನ ದಟ್ಟಣೆಯ ರಸ್ತೆಗೆ ಬಂದಿದ್ದ. ಅದೃಷ್ಟವಶಾತ್ ಅಂದು ಧನಂಜಯ ಆನೆಯನ್ನು ಮಾವುತ ಚಾಕ ಚಕ್ಯತೆಯಿಂದ ನಿಯಂತ್ರಿಸಿ ಸಂಭಾವ್ಯ ದುರಂತ ತಪ್ಪಿಸಿದ್ದ.

ಸಾಕಾನೆಗಳಾದರೂ ಕಾಳಗಕ್ಕೆ ನಿಂತರೆ ಅವು ಮಾವುತನ ಆದೇಶವನ್ನೂ ಲೆಕ್ಕಿಸುವುದಿಲ್ಲ. ಆದರೆ ಇಂತಹ ಪ್ರಸಂಗಗಳು ಅಪರೂಪ. ಸಾಮಾನ್ಯವಾಗಿ ಮದ ಏರಿದ ಸಂದರ್ಭದಲ್ಲಿ, ಇಲ್ಲವೇ ಹೆಣ್ಣಾನೆಯನ್ನು ಒಲಿಸಿಕೊಳ್ಳುವ ಪೈಪೋಟಿಯಲ್ಲಿ ಪರಸ್ಪರ ಕಾಳಗಕ್ಕಿಳಿಯುತ್ತವೆ. ಗಂಡಾನೆಗಳಿಗೆ ದಂತವೇ ಪ್ರಮುಖ ಆಯುಧ. ದಂತಗಳಿಲ್ಲದ ಮಖ್ನಾ ಆನೆಯು ದಂತಗಳಿರುವ ಆನೆಯನ್ನು ಎದುರಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಸಾಮಾನ್ಯವಾಗಿ ಮಖ್ನಾ ಆನೆ ದಾಳಿಯ ಸಂದರ್ಭ ಬಂದರೆ ಪಲಾಯನ ಮಾಡುತ್ತದೆ. ಆದರೆ ಕಾವೇರಿ ತಟದಲ್ಲಿ ಮಜ್ಜನ ಸೇವೆ ಮಾಡಿಸಿಕೊಳ್ಳುತ್ತಿದ್ದ ಮಾರ್ತಾಂಡನಿಗೆ ಓಡಲೂ ಅವಕಾಶ ಸಿಕ್ಕಿಲ್ಲ. ಇದರಡಿ ಸಿಲುಕಿದ ಮಹಿಳೆಗೂ ಇದು ಅನಿರೀಕ್ಷಿತವಾಗಿತ್ತು.

ದುಬಾರೆಯಲ್ಲಿ ಆನೆಗಳ ಜತೆ ಮನುಷ್ಯರ ಒಡನಾಟಕ್ಕೆ ಅದೆಷ್ಟೋ ವರ್ಷಗಳಿಂದ ಅಧಿಕೃತವಾಗಿಯೇ ಅವಕಾಶ ನೀಡಲಾಗಿದೆ. ಅರಣ್ಯ ಇಲಾಖೆ ಪಾಲಿಗೆ ಇದು ಪ್ರಮುಖ ಆದಾಯದ ಮೂಲವೂ ಹೌದು. ಇಲ್ಲಿ ನದಿಗಿಳಿದು ಆನೆಗಳ ಜತೆ ಫೋಟೋ ತೆಗೆಸಿಕೊಳ್ಳಲು, ಆನೆಗಳಿಗೆ ಸ್ನಾನ ಮಾಡಿಸುವಾಗ ತಾವೂ ಕೈ ಜೋಡಿಸಲು, ಆನೆ ಮೇಲೆ ಸವಾರಿ ಮಾಡಲು ಪ್ರತ್ಯೇಕ ಶುಲ್ಕವನ್ನೇ ನಿಗದಿ ಮಾಡಲಾಗಿದೆ. ಸಾಕಾನೆಗಳ ಜತೆ ನಿಕಟ ಒಡನಾಟದ ಈ ಅವಕಾಶಕ್ಕಾಗಿಯೇ ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಿದ್ದರು. ಹೀಗೆ ಬರುವ ಪ್ರವಾಸಿಗರಿಂದ ಮಾವುತರು, ಕಾವಾಡಿಗರಿಗೆ ಕೈ ತುಂಬಾ ಭಕ್ಷೀಸು ಸಿಗುತ್ತಿತ್ತು. ಇದೀಗ ದುರಂತವೊಂದು ಘಟಿಸಿದ ಬಳಿಕ ಇವೆಲ್ಲಕ್ಕೂ ಬ್ರೇಕ್ ಹಾಕಿ ಅರಣ್ಯ ಇಲಾಖೆ ಹೊಸ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿದೆ.

ಆದರೆ, ಇಂತಹ ಘಟನೆಗಳಿಂದ ನಾವು ಪಾಠ ಕಲಿಯುತ್ತಿಲ್ಲ ಎಂಬುದೇ ಬೇಸರದ ಸಂಗತಿ. ಆನೆಗಳು ಸಾಕುಪ್ರಾಣಿಗಳಾಗಿ ಬದಲಾದರೂ ವನ್ಯಸಹಜ ಪ್ರವೃತ್ತಿ ಸದಾ ಜೀವಂತವಾಗಿರುತ್ತದೆ. ವಿಶೇಷವಾಗಿ ಗಂಡಾನೆಗಳಿಗೆ ಮಸ್ತಿ ಏರಿದಾಗ ಅವುಗಳ ವರ್ತನೆಯನ್ನು ಊಹಿಸಲು ಸಾಧ್ಯವಿಲ್ಲ. ದೇಹದಲ್ಲಿ ಟೆಸ್ಟೋಸ್ಟೆರಾನ್ ಹಾರ್ಮೋನ್ ಮಟ್ಟ ನೂರಾರು ಪಟ್ಟು ಹೆಚ್ಚಾದಾಗ, ಅವು ತೀವ್ರ ಆಕ್ರಮಣಕಾರಿಯಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಸ್ವಂತ ಮಾವುತನನ್ನೂ ಅವು ಗುರುತಿಸುವುದಿಲ್ಲ. ಹೀಗಿರುವಾಗ, ಪ್ರವಾಸಿಗರು ಅವುಗಳ ಹತ್ತಿರ ಹೋಗಿ ಸೆಲ್ಫಿ ತೆಗೆದುಕೊಳ್ಳುವುದು, ಅವುಗಳ ಮೇಲೆ ಕೈಹಾಕಿ ಪೋಸ್ ನೀಡುವ ಸಾಹಸಕ್ಕೆ ಕೈಹಾಕುವುದು ಆತ್ಮಹತ್ಯೆಗೆ ಸಮಾನ.

ರೀಲ್ಸ್ ಹುಚ್ಚಿನ ಈ ಜಮಾನದಲ್ಲಿ ಜನತೆ ತಮ್ಮ ವಿವೇಕವನ್ನು ಕೈಯಲ್ಲಿಟ್ಟುಕೊಂಡಿರುವುದಿಲ್ಲ. ಮೊಬೈಲ್ ಹಿಡಿದು ಫೋಟೋ, ಸೆಲ್ಫಿ ತೆಗೆದುಕೊಳ್ಳುವ ಭರದಲ್ಲಿ ಸಾವನ್ನೂ ಕೈಯಾರೆ ಬರ ಮಾಡಿಕೊಳ್ಳುತ್ತಾರೆ. ಎರಡು ತಿಂಗಳ ಹಿಂದೆ ಮುಳ್ಳಯ್ಯನಗಿರಿ ಚಾರಣದಲ್ಲಿ ಕೇರಳದ ಬಾಲಕಿ ಜಾರಿ ಬಿದ್ದು ಸಾವು ಕಂಡಿದ್ದು ಇಂಥದ್ದೇ ಸನ್ನಿವೇಶದಲ್ಲಿ. ಪ್ರತಿದಿನವೂ ನೂರಾರು ಪ್ರವಾಸಿಗರು ಆನೆಗಳೊಂದಿಗೆ ಮುಕ್ತವಾಗಿ ಬೆರೆಯುವ ದುಬಾರೆಯಲ್ಲಿ ಮೊನ್ನೆ ತನಕ ಆನೆ ದಾಳಿಯಂತಹ ಘಟನೆ ನಡೆದಿರಲಿಲ್ಲ ಎನ್ನುವುದೇ ಹೆಚ್ಚು ಅಚ್ಚರಿಯ ಸಂಗತಿ. ನಾಗರಹಾವು, ಕಾಳಿಂಗ ಸರ್ಪದಂತಹ ಅತ್ಯಂತ ವಿಷಕಾರಿ ಹಾವುಗಳನ್ನು ಹಿಡಿದು, ಅವುಗಳೊಂದಿಗೆ ಸರಸವಾಡುವ, ಅವುಗಳ ಮುಖದ ಮುಂದೆ ಕೈ ಆಡಿಸುವ, ಹಾವಿನ ತಲೆಗೆ ಮುತ್ತಿಕ್ಕುವ ಸಾಹಸ ಪ್ರದರ್ಶಿಸುವ ರೀಲ್ಸ್‌ಗಳು ಇಂದು ಲಕ್ಷಾಂತರ ವೀಕ್ಷಣೆಗಳನ್ನು ಪಡೆಯುತ್ತಿವೆ. ಇದು ಕಲೆಯಲ್ಲ, ಧೈರ್ಯದ ಪ್ರದರ್ಶನವೂ ಅಲ್ಲ; ಇಂತಹ ಹುಚ್ಚು ಪ್ರಯತ್ನಗಳಲ್ಲಿ ಹಾವು ಕಚ್ಚಿ ಪ್ರಾಣ ಕಳೆದು ಕೊಂಡ ಉರಗ ತಜ್ಞರು ಮತ್ತು ಯುವಕರ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಹಾವು ಎಂದಿಗೂ ಮನುಷ್ಯನ ಪ್ರೀತಿಯನ್ನು ಅರ್ಥಮಾಡಿಕೊಳ್ಳುವ ಜೀವಿಯಲ್ಲ. ಅದಕ್ಕೆ ಅರ್ಥ ಮಾಡಿಕೊಳ್ಳುವಷ್ಟು ಮೆದುಳಿನ ವಿಕಾಸವೂ ಆಗಿರುವುದಿಲ್ಲ. ಹಾವಿಗೆ ತನ್ನ ರಕ್ಷಣೆ ಮಾತ್ರ ಮುಖ್ಯ. ಮನುಷ್ಯ ಹತ್ತಿರ ಬಂದಾಗ ಅದು ತನ್ನ ಆತ್ಮರಕ್ಷಣೆಗಾಗಿ ಕಚ್ಚುತ್ತದೆ. ಹಾವಿನ ಜತೆ ಸರಸವನ್ನು ಸಾಹಸ ಎಂದು ಬಿಂಬಿಸಿ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ಮೂರ್ಖತನ.

(ಮುಂದುವರೆಯುತ್ತದೆ)

51 ಸಾವಿರ ಯುವಕರಿಗೆ ಉದ್ಯೋಗ ಪತ್ರ ನೀಡಿದ ಮೋದಿ

ತಾವು 5 ರಾಷ್ಟ್ರಗಳಿಗೆ ಪ್ರವಾಸ ಹೋಗಿದ್ದೇಕೆ ಎಂದು ವಿವರಿಸಿದ ಪ್ರಧಾನಿ

• ಪ್ರಜೋದಯ ವರದಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ದೇಶದ 51,000 ಕ್ಕೂ ಹೆಚ್ಚು ಯುವಕರಿಗೆ ರೈಲ್ವೆ, ಬ್ಯಾಂಕಿಂಗ್, ರಕ್ಷಣೆ, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳ ಸರ್ಕಾರಿ ನೇಮಕಾತಿ ಪತ್ರಗಳನ್ನು ವರ್ಚುವಲ್ ಮೂಲಕ ವಿತರಿಸಿದ್ದಾರೆ. ಇದೇ ಸಂದರ್ಭದಲ್ಲಿ ಅವರು ತಮ್ಮ ಇತ್ತೀಚಿನ ಐದು ದೇಶಗಳ ಪ್ರವಾಸದ ಮಹತ್ವವನ್ನು ವಿವರಿಸುವ ಮೂಲಕ ರಾಜಕೀಯ ವಿರೋಧಿಗಳಿಗೆ ತಕ್ಕ ಉತ್ತರ ನೀಡಿದ್ದಾರೆ.

5 ದೇಶಗಳ ಪ್ರವಾಸದ ಅಸಲಿ ಉದ್ದೇಶವೇನು? ನಾನು ಕೇವಲ ಐದು ರಾಷ್ಟ್ರಗಳಿಗೆ ಪ್ರವಾಸ ಕೈಗೊಂಡು ಬಂದಿಲ್ಲ, ಬದಲಿಗೆ ಈ ಅವಧಿಯಲ್ಲಿ ಡಜನ್‌ಗಟ್ಟಲೆ ದೇಶಗಳ ಪ್ರಮುಖ ಜಾಗತಿಕ ಕಂಪನಿಗಳ ನಾಯಕರನ್ನು ಭೇಟಿ ಮಾಡಿ ವಿವರವಾದ ಚರ್ಚೆ

ನಡೆಸಿದ್ದೇನೆ ಎಂದು ಹೇಳಿದರು.

ಇಂದು ಇಡೀ ಜಗತ್ತು ಭಾರತದ ತಾಂತ್ರಿಕ ಪ್ರಗತಿ ಮತ್ತು ಇಲ್ಲಿನ ಯುವಶಕ್ತಿಯ ಬಗ್ಗೆ ಅಪಾರ ಉತ್ಸಾಹ ಹೊಂದಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಯುವಕರಿಗೆ ದೊಡ್ಡ ಮನ್ನಣೆ ಮತ್ತು ಅವಕಾಶಗಳು ಸಿಗಬೇಕೆಂಬುದೇ ನನ್ನ ವಿದೇಶಿ ಪ್ರವಾಸಗಳ ಮುಖ್ಯ ಉದ್ದೇಶವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಯಾವ ದೇಶದೊಂದಿಗೆ ಎಂತಹ ಒಪ್ಪಂದಗಳು? ಭಾರತವು ವಿಶ್ವದಲ್ಲೇ

ಮೋದಿ ಇಂಧನ ಉಳಿತಾಯಕ್ಕೆ ಜೈ ಎಂದ ಕಮಲ್‌ಹಾಸನ್

ಚೆನ್ನೈ: ಪ್ರಧಾನಿ ನರೇಂದ್ರ ಮೋದಿ ಅವರ ಇಂಧನ ಉಳಿತಾಯ ಮಂತ್ರಕ್ಕೆ ಕಮಲ್ ಹಾಸನ್ ಬೆಂಬಲ ವ್ಯಕ್ತಪಡಿಸಿ ಗಮನ ಸೆಳೆದಿದ್ದಾರೆ. ಮೋದಿ ವಿರೋಧಿ ಪಾಳಯದಲ್ಲಿ ಗುರುತಿಸಿಕೊಂಡಿರುವ ಕಮಲ್ ಹಾಸನ್ ಅವರು ತಮ ಇನ್ ಸ್ಟಾಗ್ರಾಮ್‌ನಲ್ಲಿ ಪ್ರಧಾನಿಗಳ ಹೇಳಿಕೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇರಾನ್ ಯುದ್ಧದ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರುತ್ತಿರುವುದು ಕೇವಲ ಅಂಕಿ–ಅಂಶಗಳಲ್ಲ, ಅದು ನಮ್ಮ ಅಡುಗೆ ಮನೆಯಿಂದ ಹಿಡಿದು ರೈತನ ಹೊಲದವರೆಗೂ ಪರಿಣಾಮ ಬೀರುತ್ತದೆ ಎಂಬ ಕಟು ಸತ್ಯವನ್ನು ಕಮಲ್ ಬಿಚ್ಚಿಟ್ಟಿದ್ದಾರೆ.

ಅತ್ಯಂತ ನಂಬಿಕಸ್ಥ ಸಪ್ಲೈ ಚೈನ್ ದೇಶವಾಗಿ ಹೊರಹೊಮ್ಮುತ್ತಿದೆ ಎಂದ ಮೋದಿ, ವಿವಿಧ ದೇಶಗಳೊಂದಿಗೆ ಮಾಡಿಕೊಂಡಿರುವ ಪ್ರಮುಖ ಒಪ್ಪಂದಗಳನ್ನು ಪಟ್ಟಿ ಮಾಡಿದರು.

ನೆದರ್‌ಲ್ಯಾಂಡ್ಸ್: ಜಗತ್ತಿನ ಹೆಸರಾಂತ ಸೆಮಿಕಂಡಕ್ಟರ್ ಕಂಪನಿ ಭಾರತದ ಕಂಪನಿಯೊಂದಿಗೆ ಅತ್ಯಂತ ಅಪರೂಪದ ಒಪ್ಪಂದ ಮಾಡಿಕೊಂಡಿದೆ. ಇದು ದೇಶದಲ್ಲಿ ಲೆಕ್ಕವಿಲ್ಲದಷ್ಟು ಉದ್ಯೋಗಗಳನ್ನು ಸೃಷ್ಟಿಸಲಿದೆ.

ಸ್ವೀಡನ್ ಮತ್ತು ಇಟಲಿ: ಹಸಿರು ಇಂಧನ, ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ನಾವೀನ್ಯತೆ ಹಾಗೂ ರಕ್ಷಣಾ ಕ್ಷೇತ್ರಗಳಲ್ಲಿ ಮಹತ್ವದ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ.

ಯುಎಇ ಮತ್ತು ನಾರ್ವೆ: ಹಡಗು ನಿರ್ಮಾಣ, ಸೂಪರ್ ಕಂಪ್ಯೂಟಿಂಗ್ ಮತ್ತು ಹಸಿರು ತಂತ್ರಜ್ಞಾನದಲ್ಲಿ ಜಂಟಿಯಾಗಿ ಕೆಲಸ ಮಾಡಲು ಒಪ್ಪಂದಗಳಾಗಿವೆ.

ಅಭಿವೃದ್ಧಿ ಹೊಂದಿದ ಭಾರತಕ್ಕೆ ಯುವಕರೇ ಪಾಲುದಾರರು ನೇಮಕಾತಿ ಪತ್ರ ಪಡೆದ ಯುವಕರನ್ನು ಅಭಿನಂದಿಸಿದ ಪ್ರಧಾನಿ ಮೋದಿ, ಇಂದು ನೀವೆಲ್ಲರೂ ದೇಶದ ಅಭಿವೃದ್ಧಿ ಪ್ರಯಾಣದಲ್ಲಿ ಅತ್ಯಂತ ಜವಾಬ್ದಾರಿಯುತ ಪಾಲುದಾರರಾಗುತ್ತಿದ್ದೀರಿ. ಮುಂಬರುವ ವರ್ಷಗಳಲ್ಲಿ ವಿಕಸಿತ ಭಾರತದ ಸಂಕಲ್ಪವನ್ನು ಈಡೇರಿಸುವಲ್ಲಿ ನಿಮ್ಮ ಪಾತ್ರ ನಿರ್ಣಾಯಕವಾಗಿದೆ ಎಂದು ಕರೆ ನೀಡಿದರು. ಶುದ್ಧ ಇಂಧನ, ಹಸಿರು ಹೈಡ್ರೋಜನ್ ಮತ್ತು ಸುಸ್ಥಿರ ಉತ್ಪಾದನಾ ವಲಯಗಳು ವೇಗವಾಗಿ ಬೆಳೆಯುತ್ತಿದ್ದು, ಯುವಕರಿಗೆ ಭವಿಷ್ಯದಲ್ಲಿ ಉದ್ಯೋಗಾವಕಾಶಗಳ ಮಹಾಪೂರವೇ ಹರಿದು ಬರಲಿದೆ ಎಂದು ಅವರು ಭರವಸೆ ನೀಡಿದರು.

ನೀಟ್ ಪಶ್ನೆ ಪತ್ರಿಕೆ ಸೋರಿಕೆ ರೂವಾರಿ ಸೆರೆ

ನವದೆಹಲಿ: ನೀಟ್ ಪರೀಕ್ಷೆಯ ಭೌತಶಾಸ್ತ್ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಟಿಎ ತಜ್ಞರೊಬ್ಬರನ್ನು ಸಿಬಿಐ ಬಂಧಿಸಿದೆ.

ಮಹಾರಾಷ್ಟ್ರದ ಪುಣೆಯಲ್ಲಿರುವ ಸೇಥ್ ಹಿರಾಲಾಲ್ ಸರಾಫ್ ಪ್ರಶಾಲಾದಲ್ಲಿ ಉದ್ಯೋಗದಲ್ಲಿರುವ ಆರೋಪಿ ಮನೀಷಾ ಸಂಜಯ್ ಹವಾಲ್ದಾರ್ ಬಂಧಿತ ಆರೋಪಿಯಾಗಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಜ್ಞರಾಗಿ ನೇಮಕಗೊಂಡಿದ ಅವರನ್ನು ಕೇಂದ್ರೀಯ ಸಂಸ್ಥೆಯ ವಿಚಾರಣೆಯ ನಂತರ ಬಂಧಿಸಲಾಗಿದೆ. ಮೇ 16 ರಂದು ಅರೆಸ್ಟ್ ಆದ ಸಹ–ಆರೋಪಿ ಮನೀಷಾ ಮಾಂಧರೆ ಜೊತೆ ನೀಟ್ ಯುಜಿ ಪರೀಕ್ಷೆಯ ಹಲವಾರು ಭೌತಶಾಸ್ತ್ರ ಪ್ರಶ್ನೆಗಳನ್ನು ಹಂಚಿಕೊಂಡಿದ್ದಾರೆ ಎಂದು ತನಿಖಾಧಿಕಾರಿಗಳು ಆರೋಪಿಸಿದ್ದಾರೆ.

ಹವಾಲ್ದಾರ್ ಹಂಚಿಕೊಂಡ ಪ್ರಶ್ನೆಗಳು 2026 ರ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಬಂದಿದ್ದ ಭೌತಶಾಸ್ತ್ರದ ಪ್ರಶ್ನೆಗಳಿಗೆ ಹೊಂದಿಕೆಯಾಗುತ್ತವೆ.

ಕಾಡಾನೆಗಳ ಸಂಚಾರ: ಅರಣ್ಯ ಇಲಾಖೆ ಜಾಗೃತಿ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಉದೇವಾರ ಗ್ರಾಮ ವ್ಯಾಪ್ತಿಯಲ್ಲಿ ಬಿಟಮ್ಮ–1 ಗುಂಪಿನ ಕಾಡಾನೆಗಳು ಸಂಚರಿಸುತ್ತಿರುವ ಹಿನ್ನಲೆ ಸಕಲೇಶಪುರ ವಲಯ ಅರಣ್ಯಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸಾರ್ವಜನಿಕರು ಹಾಗೂ ಕೂಲಿ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿದರು.

ಗ್ರಾಮದಲ್ಲಿ ರಾತ್ರಿ ವೇಳೆ ಹಾಗು ಮುಂಜಾನೆ ಸಮಯದಲ್ಲಿ ಕಾಡಾನೆಗಳ ಓಡಾಟ ಹೆಚ್ಚಾಗಿರುವ ಮಾಹಿತಿ ಹಿನ್ನಲೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸಿದರು. ವಿಶೇಷವಾಗಿ ತೋಟಗಳಿಗೆ ತೆರಳುವ ಕೂಲಿ ಕಾರ್ಮಿಕರು, ರೈತರು ಹಾಗು ಸಾರ್ವಜನಿಕರು ಒಬ್ಬರೇ ಸಂಚರಿಸದೆ ಗುಂಪಾಗಿ ತೆರಳಬೇಕು, ಕತ್ತಲೆ ಸಮಯದಲ್ಲಿ ಅನಗತ್ಯ ಓಡಾಟ ತಪ್ಪಿಸಬೇಕು ಎಂದು ಮನವಿ ಮಾಡಿದರು.

ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿ, ಕಾಡಾನೆಗಳು ಕಂಡುಬಂದಲ್ಲಿ ತಕ್ಷಣ ಇಲಾಖೆಗೆ ಮಾಹಿತಿ ನೀಡುವಂತೆ, ಜೊತೆಗೆ ಆನೆಗಳ ಚಲನವಲನ ಕುರಿತು ನಿರಂತರ ನಿಗಾ ವಹಿಸಲಾಗುತ್ತಿದ್ದು, ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಸಿಇಟಿ ಸೀಟು ಹಂಚಿಕೆ ಕಾರ್ಯಾಗಾರ

ಮಲೆನಾಡು ಕಾಲೇಜಿನಲ್ಲಿ 5 ದಿನಗಳ ಕಾಲ

• ಪ್ರಜೋದಯ ವರದಿ

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದ ಸಹಯೋಗದೊಂದಿಗೆ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕ್ರಿಯೆ ಕುರಿತು ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ಸಲುವಾಗಿ ಯುಜಿಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರ ಆಯೋಜಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸೀಟು ಹಂಚಿಕೆ ಪ್ರಕ್ರಿಯೆ ಮೂಲಕ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋಸ್‌ರ್ಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಸೀಟು ಹಂಚಿಕೆ ಪ್ರಕ್ರಿಯೆ, ಕೌನ್ಸೆಲಿಂಗ್ ವಿಧಾನ ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಮಾಹಿತಿ ನೀಡಲಾಗುವುದು.

ಈ ಕಾರ್ಯಾಗಾರವು ಮೇ 25, 26, 27, 29 ಹಾಗೂ 30 ರಂದು ಕಾಲೇಜಿನ ಅಲುಮ್ನಿ ಹಾಲ್‌ನಲ್ಲಿ ನಡೆಯಲಿದ್ದು, ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಕಾಲೇಜಿಗೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು.

ಆಸಕ್ತರು ಕಾರ್ಯಾಗಾರದಲ್ಲಿ ಭಾಗವಹಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದಾಗಿದ್ದು, ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9141305843 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಕ್ರೀಡಾಸಕ್ತಿಯಿಂದ ದೈಹಿಕ –ಮಾನಸಿಕ ಆರೋಗ್ಯ ವೃದ್ಧಿ: ಶ್ರೀಧರ್

ಬೇಲೂರಿನಲ್ಲಿ ಮಾಧ್ಯಮ ದಿನಾಚರಣೆ ಅಂಗವಾಗಿ ಸ್ನೇಹ ಸಮ್ಮಿಲನ ಕ್ರಿಕೆಟ್ ಪಂದ್ಯಾವಳಿ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ರಾಜ್ಯ ಉಪಾಧ್ಯಕ್ಷ ಎಚ್.ಬಿ. ಮದನಗೌಡ ಹಾಗೂ ಜಿಲ್ಲಾಧ್ಯಕ್ಷ ಜಿ.ಆರ್.ಕೆಂಚೇಗೌಡರ ಮಾರ್ಗದರ್ಶನದಲ್ಲಿ ಹಮ್ಮಿಕೊಂಡಿದ್ದ ಮಾಧ್ಯಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸ್ನೇಹ ಸಮ್ಮಿಲನ ಕ್ರಿಕೆಟ್ ಪಂದ್ಯಾವಳಿಗೆ ಪುರಸಭಾಧ್ಯಕ್ಷ ಅಕ್ರಮ್ ಶರೀಫ್ ಮತ್ತು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಚಾಲನೆ ನೀಡಿದರು.

ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗೆ ಕ್ರೀಡಾಸಕ್ತಿ ಅತ್ಯಗತ್ಯ. ಇದು ಏಕಾಗ್ರತೆ, ನಾಯಕತ್ವ ಗುಣ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದಿನ ಮೊಬೈಲ್ ಯುಗದಲ್ಲಿಯೂ ಯುವಕರು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳು ವುದು ಸಮಾಜದ ಸ್ವಾಸ್ಥ್ಯಕ್ಕೆ ಮುನ್ನುಡಿಯಾಗಿದೆ ಎಂದರು.

ಪಟ್ಟಣದ ಜೂನಿಯರ್ ಕಾಲೇಜು ಅವ

ರಣದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಡೆದ ಪತ್ರಕರ್ತರು ಮತ್ತು ವಿವಿಧ ಇಲಾಖೆಗಳೊಂದಿಗೆ ಸ್ನೇಹ ಸಮ್ಮಿಲನ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಇಂದು ಮೊಬೈಲ್‌ನಿಂದಾಗಿ ಯುವ ಜನರಲ್ಲಿ ಕ್ರೀಡಾಸಕ್ತಿ ಕುಂಠಿತಗೊಳ್ಳುತ್ತಿದ್ದು, ಈ ಬಗ್ಗೆ ಯುವಕರು ಭಾಗಿಯಾಗುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಮುನ್ನುಡಿ ಬರೆಯಲು ಸಾಧ್ಯ. ಕ್ರೀಡೆಯಲ್ಲಿ ಗೆಲ್ಲುವ ಹುಮ್ಮಸ್ಸಿಗಿಂತ ಭಾಗವಹಿಸುವುದು ಬಹು ಮುಖ್ಯ. ಸೋಲು ಗೆಲುವು ಪ್ರತಿ ವ್ಯವಸ್ಥೆಯಲ್ಲಿ ಸಹಜ. ಆದರೆ ಸಮನಾಗಿ ಸ್ವೀಕರಿಸಿ ಮುನ್ನಡೆದರೆ ಕ್ರೀಡಾ ಸಾರ್ಥಕ್ಯಕ್ಕೆ ಕೈಗನ್ನಡಿಯಾಗಲಿದೆ ಎಂದು ಹೇಳಿದರು.

ಬೇಲೂರು ಸಿಪಿಐ ರೇವಣ್ಣ ಮಾತನಾಡಿ, ಪತ್ರಕರ್ತರು ಮತ್ತು ಇಲಾಖೆಗಳ ನಡುವೆ ಸಾಮರಸ್ಯ ತರಲು ಮತ್ತು ಒತ್ತಡ ಬದುಕಿನಿಂದ ಬರಲು ಇಂತಹ ಕ್ರೀಡಾಕೂಟವನ್ನು ತಾಲ್ಲೂಕು ಪತ್ರಕರ್ತರ ಸಂಘ ಹಮ್ಮಿಕೊಂಡಿರುವುದು ನಿಜಕ್ಕೂ ಸಂತೋಷವಾಗಿದೆ. ಕ್ರೀಡೆ ಮನುಷ್ಯನಿಗೆ ಅತ್ಯಂತ ಪ್ರಮುಖ ಪಾತ್ರ ವಹಿಸುವ ಹಿನ್ನೆಲೆಯಲ್ಲಿ ವಯಸ್ಸಿನ ಅಂತರವಿಲ್ಲದೆ ಕ್ರೀಡೆ, ಯೋಗ, ಧ್ಯಾನ ಇವುಗಳಲ್ಲಿ ಕಡ್ಡಾಯವಾಗಿ ಭಾಗವಹಿಸಿ ಎಂದು ತಿಳಿಸಿದರು.

ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜ್ ಮಾತನಾಡಿ, ತಾಲ್ಲೂಕು ಪತ್ರಕರ್ತರ ಸಂಘದ ಕಳೆದ ಮೂರು ದಶಕದಿಂದ ಪತ್ರಕರ್ತರ ಅಥವಾ ಮಾಧ್ಯಮ ದಿನಾಚರಣೆ ಅಂಗವಾಗಿ ವಿವಿಧ ಇಲಾಖೆಯೊಂದಿಗೆ ಸ್ನೇಹ ಸಮ್ಮಿಲನ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಂಡು ಬರುತ್ತಿದೆ. ಈ ಬಾರಿ ಕೂಡ ಸುಮಾರು 12 ತಂಡಗಳು ಭಾಗವಹಿಸಿವೆ. ವಿಜೇತರಾದ ತಂಡಗಳಿಗೆ ಮಾಧ್ಯಮ ದಿನಾಚರಣೆ ದಿನ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ತಾಲ್ಲೂಕು ಪತ್ರಕರ್ತರ ಸಂಘ ಸಮಾಜಮುಖಿ ಮತ್ತು ಜನಪರ ಕೆಲಸಗಳನ್ನು ಮಾಡುವ ಬಗ್ಗೆ ತಿಳಿಸಿದರು.

ಬೇಲೂರು ಪುರಸಭಾ ಅಧ್ಯಕ್ಷ ಅಕ್ರಂ ಶರೀಪ್, ಮಾಜಿ ಅಧ್ಯಕ್ಷ ಎ.ಆರ್.ಅಶೋಕ್, ಸದಸ್ಯರಾದ ಜಮಾಲ್ಲಿದ್ದಿನ್, ವಕೀಲರ ಸಂಘದ ಅಧ್ಯಕ್ಷ ನಟರಾಜ್, ಬೇಲೂರು ಲಯನ್ಸ್ ಮಾಜಿ ಅಧ್ಯಕ್ಷ ಡಾ.ಚಂದ್ರಮೌಳಿ, ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಬೇ.ನಾ.ತಾರಾನಾಥ, ಎನ್.ಅನಂತು, ಮಂಜುನಾಥ ಶೆಟ್ಟಿ, ಡಿ.ಬಿ.ಮೋಹನ್ ಕುಮಾರ್, ರಾಘವೇಂದ್ರ ಹೊಳ್ಳ, ಹೆಬ್ಬಾಳು ಹಾಲಪ್ಪ, ವೈ.ಆರ್.ಭಾರತೀಗೌಡ, ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲಕ್ಷ್ಮಣ್, ಖಜಾಂಚಿ ಲೋಹಿತ್, ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕ ಮಲ್ಲೇಶ, ಡಾ.ರಾಜಕುಮಾರ ಅಭಿಮಾನಿ ಸಂಘದ ಅಧ್ಯಕ್ಷ ತೀರ್ಥಂಕರ, ಪಿಎಸ್‌ಐ ಶಿವಾನಂದ ಪಾಟೀಲ ಹಾಜರಿದ್ದರು.

ಭಾರತಕ್ಕೆ ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಭೇಟಿ

ಯುದ್ಧ ನಡುವೆ ಕುತೂಹಲ ಕೆರಳಿಸಿದ ಪ್ರವಾಸ | ಇಂಧನ ವ್ಯಾಪಾರ ಕುರಿತು ಚರ್ಚೆ ಸಾಧ್ಯತೆ

• ಪ್ರಜೋದಯ ವರದಿ

ನವದೆಹಲಿ: ಭವಿಷ್ಯದಲ್ಲಿ ಶ್ವೇತಭವನಕ್ಕೆ ಭೇಟಿ ನೀಡಿ ಎಂದು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಅವರು ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಹ್ವಾನ ನೀಡಿದ್ದಾರೆ.

ಆಹ್ವಾನ ನೀಡಿದ್ದರ ಬಗ್ಗೆ ಭಾರತದಲ್ಲಿರುವ ಅಮೇರಿಕಾ ರಾಯಭಾರಿ ಸಾಮಾಜಿಕ ಜಾಲತಾಣಗಳಲ್ಲಿ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಶ್ವೇತಭವನಕ್ಕೆ ಭೇಟಿ ನೀಡಿ ಎಂದು ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಅವರ ಪರವಾಗಿ ಮಾರ್ಕೊ ರೂಬಿಯೋ ಪ್ರಧಾನಿ ಮೋದಿ ಅವರಿಗೆ ಆಹ್ವಾನ ನೀಡಿದ್ದಾರೆಂದು ಬರೆದುಕೊಂಡಿದ್ದಾರೆ.

ಭಾರತದೊಂದಿಗಿನ ಸಂಬಂಧ ಸುಧಾರಿಸುವ ಸಲುವಾಗಿ ಮಾರ್ಕೊ ರುಬಿಯೋ ಇದೇ ಮೊದಲ ಬಾರಿಗೆ ಭಾರತ ಪ್ರವಾಸ ಕೈಗೊಂಡಿದ್ದಾರೆ. ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಿದ್ದಾರೆ. ದೆಹಲಿಯಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿಯೂ ರುಬಿಯೋ ಭಾಗಿಯಾಗಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಿದ್ದಾರೆ.

ರೂಬಿಯೊ ಭೇಟಿ ಉದ್ದೇಶವೇನು: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಭಾರತಕ್ಕೆ ಭೇಟಿ ನೀಡಿರುವುದು ರಾಜತಾಂತ್ರಿಕವಾಗಿ ಮಹತ್ವ ಪಡೆದುಕೊಂಡಿದೆ.



ಶನಿವಾರ ಕೋಲ್ಕತ್ತಗೆ ಆಗಮಿಸುವ ಮೂಲಕ ತಮ್ಮ ನಾಲ್ಕು ದಿನಗಳ ಭಾರತ ಪ್ರವಾಸವನ್ನು ಆರಂಭಿಸಿದ್ದಾರೆ. ಇಲ್ಲಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರೂಬಿಯೊ ಅವರನ್ನು ಭಾರತದಲ್ಲಿನ ಅಮೇರಿಕಾ ರಾಯಭಾರಿ ಸೆರ್ಗಿಯೊ ಗೋರ್ ಬರಮಾಡಿಕೊಂಡರು.

ರಾಜತಾಂತ್ರಿಕ ಅಂಶಗಳು:

14 ವರ್ಷಗಳ ನಂತರ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯೊಬ್ಬರು ಕೋಲ್ಕತ್ತಗೆ ಭೇಟಿ ನೀಡಿದ್ದಾರೆ. 2012ರ ಮೇ ತಿಂಗಳಲ್ಲಿ ಅಂದಿನ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಈ ನಗರಕ್ಕೆ ಭೇಟಿ ನೀಡಿದ್ದರು. ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗಷ್ಟೇ ಮಹತ್ವದ ರಾಜಕೀಯ ಬೆಳವಣಿಗೆಗಳು ನಡೆದಿದ್ದು ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ವಾರಗಳಲ್ಲಿ ಈ ಭೇಟಿ ರಾಜಕೀಯವಾಗಿಯೂ ಮಹತ್ವ ಪಡೆದುಕೊಂಡಿದೆ. ಇರಾನ್ ಮೇಲೆ ಅಮೇರಿಕಾ–ಇಸ್ರೇಲ್ ದಾಳಿಯಿಂದಾಗಿ ಜಾಗತಿಕವಾಗಿ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದ್ದು ಇರಾನ್ ತೈಲ ಸಾಗಣೆ ಮಾರ್ಗವಾದ ಹೋರ್ಮುಜ್ ಜಲಸಂಧಿಯನ್ನು ಮುಚ್ಚಿದೆ. ಅದರ ತೆರವಿನ ಬಗ್ಗೆ ಚರ್ಚೆ ನಡೆಯಲಿವೆ. ಈ ಇಂಧನ ಬಿಕ್ಕಟ್ಟಿನ ಪರಿಣಾಮ ಭಾರತವನ್ನು ರಷ್ಯಾದಿಂದ ತೈಲ ಖರೀದಿಸುವುದನ್ನು ದೂರವಿಡುವ ಅಮೇರಿಕಾದ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ. ಈ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇದೆ. ಭಾರತಕ್ಕೆ ಬರುವ ಮುನ್ನ ಮಾತನಾಡಿದ್ದ ಮಾರ್ಕೊ ರೂಬಿಯೊ, ಭಾರತ ನಮ್ಮ ಅತ್ಯುತ್ತಮ ಮಿತ್ರ ಹಾಗು ಉತ್ತಮ ಪಾಲುದಾರ ರಾಷ್ಟ್ರವಾಗಿದೆ. ಈ ಪ್ರವಾಸದಲ್ಲಿ ಇಂಧನದ ಬಗ್ಗೆಯೆ ನಮ್ಮ ಪ್ರಮುಖ ಗಮನ ಇರಲಿದೆ. ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತೈಲ ಮಾರಾಟ ಮಾಡಲು ನಾವು ಸಿದ್ಧರಿದ್ದೇವೆ. ಭಾರತ ಎಷ್ಟು ಇಂಧನ ಖರೀದಿಸಲು ಬಯಸುತ್ತದೆಯೋ, ಅಷ್ಟನ್ನೂ ಪೂರೈಸಲು ಅಮೆರಿಕ ಉತ್ಸುಕವಾಗಿದೆ ಎಂದು ಹೇಳಿದ್ದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಹುಟ್ಟುಹಬ್ಬ ಆಚರಣೆ

• ಪ್ರಜೋದಯ ವರದಿ

ಹಳೇಬೀಡು: ಮಾಜಿ ಶಾಸಕ ಹಾಗೂ ಜೆಡಿಎಸ್ ಜಿಲ್ಲಾ ಘಟಕ ಅಧ್ಯಕ್ಷ ಕೆ.ಎಸ್.ಲಿಂಗೇಶ್ ಅವರ ಹುಟ್ಟಿದ ಹಬ್ಬವನ್ನು ಶನಿವಾರ ಹಳೇಬೀಡಿನಲ್ಲಿ ಅಭಿಮಾನಿಗಳು ಆಚರಿಸಿದರು.

ಅಭಿಮಾನಿಗಳು ಲಿಕಗೇಶ್ ಅವರಿಗೆ ಶಾಲು, ಹಾರ ಹಾಗೂ ಹಣ್ಣಿನ ಬುಟ್ಟಿ ನೀಡಿ ಅಭಿನಂದಿಸಿದರು.

ಲಿಂಗೇಶಣ್ಣ ಶಾಸಕರಾಗಿದ್ದಾಗ ಮೇಲು– ಕೀಳು ಎನ್ನದೆ ಎಲ್ಲರನ್ನೂ ಸಮಾನವಾಗಿ ನೋಡಿದರು. ಹಳೇಬೀಡು, ಮಾದಿಹಳ್ಳಿ ಹೋಬಳಿಗಳಿಗೆ ಯಗಚಿ ನದಿ ನೀರು ಹರಿಸಿ ಭಗೀರಥ ಎನಿಸಿಕೊಂಡಿದ್ದಾರೆ. ಅಭಿವೃದ್ಧಿ ಕೆಲಸದಲ್ಲಿ ಮುಂದಾಗಿದ್ದರಿಂದ ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಎಲ್ಲರನ್ನೂ ಸಮಾನತೆಯಿಂದ ಕಂಡಿದ್ದರಿಂದ ಅಜಾತಶತ್ರು ಆಗಿದ್ದಾರೆ ಎಂದು

ಅಭಿಮಾನಿಗಳು ಕೊಂಡಾಡಿದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಮಾತನಾಡಿ ಕುಮಾರಣ್ಣ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಸಾಕಷ್ಟು ಅನುದಾನ ನೀಡಿದ್ದರಿಂದ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾದವು. ಬಜೆಟ್ನಲ್ಲಿ ಕುಮಾರಣ್ಣ ಮೀಸಲಿಟ್ಟಿದ್ದರಿಂದ ರಣಘಟ್ಟ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಆರ್.ಮಧು, ಸಿ.ಆರ್. ಲಿಂಗಪ್ಪ (ಪ್ರೇಮಣ್ಣ), ಎಚ್.ಎಂ.ನಿಂಗಪ್ಪ, ಮಾಜಿ ಸದಸ್ಯ ಮೋಹನ್, ಮುಖಂಡರಾದ ಬಿ.ಎಂ.ಮಲ್ಲಿಕಾರ್ಜುನ, ಶಿವಲಿಂಗೇಗೌಡ ಇನ್ನಿತರರು ಹಾಜರಿದ್ದರು

ಪೆಟ್ರೋಲ್ ದರ ಏರಿಕೆಗೆ ಕಾಂಗ್ರೆಸ್ ಸರ್ಕಾರ ಕಾರಣ

ಅಂಕಿ– ಅಂಶಗಳನ್ನು ನೀಡಿ ವಾದ ಮುಂದಿಟ್ಟ ವಿರೋಧ ಪಕ್ಷದ ನಾಯಕ ಆರ್.ಅಶೋಕ್

• ಪ್ರಜೋದಯ ವರದಿ

ಬೆಂಗಳೂರು: ಪೆಟ್ರೋಲ್ ದರವು ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದ್ದು, ಪೆಟ್ರೋಲ್ ಬಂಕ್‌ನಲ್ಲಿ ನಿಮ್ಮ ಜೇಬಿಗೆ ಕತ್ತರಿ ಹಾಕುತ್ತಿರುವುದು ಯಾರು? ಸಿಎಂ ಸಿದ್ದರಾಮಯ್ಯ ಅವರು ಮುಚ್ಚಿಡುತ್ತಿರುವ ಅಸಲಿ ಸತ್ಯ ಇಲ್ಲಿದೆ ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವಾದ ಮಂಡಿಸಿದ್ದಾರೆ.

ಅಶೋಕ್ ವಾದ ಏನು?

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿದಾಗಲೆಲ್ಲಾ ಕಾಂಗ್ರೆಸ್ ಸರ್ಕಾರ ತಕ್ಷಣ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತದೆ. ಕೇಂದ್ರವೇ ಬೆಲೆ ಇಳಿಸಬೇಕು. ನಮ್ಮ ಕೈಯಲ್ಲಿ ಏನೂ ಇಲ್ಲ! ಎನ್ನುತ್ತಿದೆ.

ಆದರೆ ಇದು ಅರ್ಧ ಸತ್ಯ. ಪ್ರತಿಯೊಬ್ಬ ಕನ್ನಡಿಗರು ತಿಳಿಯಲೇಬೇಕಾದ ಅಸಲಿ ಲೆಕ್ಕಾಚಾರವನ್ನು ನಾನು ನಿಮ್ಮ ಮುಂದಿಡುತ್ತಿದ್ದೇನೆ ಎಂದು ಅಂಕಿ– ಅಂಶಗಳನ್ನು ತೆರೆದಿಟ್ಟಿದ್ದಾರೆ.

ಕೇಂದ್ರ ಸರ್ಕಾರ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ನಿಗದಿತ ರೂಪಾಯಿ ಮೊತ್ತವನ್ನು ಅಬಕಾರಿ ಸುಂಕವಾಗಿ ವಿಧಿಸುತ್ತದೆ. ಪೆಟ್ರೋಲ್ ಬೆಲೆ 80 ರೂ. ಇರಲಿ, 108 ರೂ. ಆಗಲಿ, ಕೇಂದ್ರಕ್ಕೆ ಸಿಗುವ ತೆರಿಗೆ ಮೊತ್ತ ಬಹುತೇಕ ಒಂದೇ ಆಗಿರುತ್ತದೆ. ಜಾಗತಿಕ ಮಾರುಕಟ್ಟೆ ಯಲ್ಲಿ ಬೆಲೆ ಏರಿದರೆ ಕೇಂದ್ರ ಸರ್ಕಾರಕ್ಕೆ ನಯಾ ಪೈಸೆ ಹೆಚ್ಚುವರಿ ತೆರಿಗೆ ಆದಾಯ ಸಿಗುವುದಿಲ್ಲ. ಬೆಲೆ ಏರಿಕೆಯಿಂದ ಕೇಂದ್ರದ ಖಜಾನೆ ತುಂಬುವುದಿಲ್ಲ ಎಂದಿದ್ದಾರೆ.

ಆದರೆ ಕರ್ನಾಟಕ ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಶೇಕಡಾವಾರು ವ್ಯಾಟ್ ವಸೂಲಿ ಮಾಡುತ್ತದೆ. ಪೆಟ್ರೋಲ್ ವ್ಯಾಟ್ – 29.84% ಹಾಗೂ ಡೀಸೆಲ್ ವ್ಯಾಟ್ – 18.4%. ಇದರಿಂದ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿದ ಕ್ಷಣದಿಂದಲೇ ಕರ್ನಾಟಕ ಸರ್ಕಾರದ ಆದಾಯ ತನ್ನಿಂದ ತಾನೇ ಹೆಚ್ಚಾಗುತ್ತದೆ ಎಂದು ತಿಳಿಸಿದ್ದಾರೆ.

ಅಂದರೆ ಜನ ಸಾಮಾನ್ಯರಿಗೆ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಾದಷ್ಟೂ, ರಾಜ್ಯ ಸರ್ಕಾರದ ಪಾಲು ಅಷ್ಟೇ ಹೆಚ್ಚಾಗುತ್ತದೆ. ಒಂದು ವೇಳೆ ಪೆಟ್ರೋಲ್ ಮೂಲ ಬೆಲೆ 50 ರೂ. ಇದ್ದರೆ, ರಾಜ್ಯ ಸರ್ಕಾರಕ್ಕೆ ಸುಮಾರು 15 ರೂ. ತೆರಿಗೆ ಸಿಗುತ್ತದೆ. ಅದೇ ಬೆಲೆ 70 ರೂ.ಗೆ ಏರಿದರೆ, ರಾಜ್ಯ ಸರ್ಕಾರದ ಪಾಲು ತಾನಾಗಿಯೇ 21 ರೂ.ಗೆ ಏರುತ್ತದೆ! ಅಂದರೆ ರಾಜ್ಯ ಸರ್ಕಾರ ನೇರವಾಗಿ ಬೆಲೆ ಹೆಚ್ಚಿಸದಿದ್ದರೂ, ಶೇಕಡವಾರು ವ್ಯಾಟ್ ಮೂಲಕ ಜನರ ಜೇಬಿನಿಂದ ಹೆಚ್ಚಿನ ತೆರಿಗೆ ವಸೂಲಿ ಮಾಡುತ್ತಿದೆ ಎಂದು ಅಶೋಕ್ ಅವರು ಆರೋಪಿಸಿದ್ದಾರೆ.

ಬಂಗಾಳದಲ್ಲಿ ಬಕ್ರೀದ್ ರಜೆ 1 ದಿನಕ್ಕೆ ಕಡಿತ, ಪ್ರಾಣಿ ವಧೆಗೂ ಕಠಿಣ ನಿಯಮ

• ಪ್ರಜೋದಯ ವರದಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ಮತ್ತು ಸಾಮಾಜಿಕ ವಲಯದಲ್ಲಿ ಬಕ್ರೀದ್ ಹಬ್ಬದ ರಜೆ ಹಾಗೂ ಪ್ರಾಣಿ ಬಲಿ ನಿಯಮಗಳ ಕುರಿತು ಭಾರಿ ಚರ್ಚೆ ಮತ್ತು ವಿವಾದ ಆರಂಭವಾಗಿದೆ. ರಾಜ್ಯದ ಹೊಸ ಬಿಜೆಪಿ ಸರ್ಕಾರವು ಬಕ್ರೀದ್ ಹಬ್ಬಕ್ಕೆ ನೀಡಲಾಗುತ್ತಿದ್ದ ಎರಡು ದಿನಗಳ ಸಾರ್ವಜನಿಕ ರಜೆಯನ್ನು ಕೇವಲ ಒಂದು ದಿನಕ್ಕೆ ಕಡಿತಗೊಳಿಸಿ ಆದೇಶ ಹೊರಡಿಸಿದೆ. ಈ ಹಿಂದೆ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದಿದ್ದ ರಜಾ ಪಟ್ಟಿಯನ್ನು ಪರಿಷ್ಕರಿಸಿ ರಾಜ್ಯ ಹಣಕಾಸು ಇಲಾಖೆಯು ಶುಕ್ರವಾರ ಅಧಿಕೃತ ಹೊಸ ಅಧಿಸೂಚನೆ ಬಿಡುಗಡೆ ಮಾಡಿದೆ.



ಹಳೆಯ ಆದೇಶದ ಪ್ರಕಾರ, 2026ರ ಮೇ 26 ಮತ್ತು ಮೇ 27 ರಂದು ಬಕ್ರೀದ್ ಪ್ರಯುಕ್ತ ಸಾರ್ವಜನಿಕ ರಜೆ ಘೋಷಿಸಲಾಗಿತ್ತು. ಆದರೆ, ಪ್ರಸಕ್ತ ವರ್ಷದಲ್ಲಿ ಮೇ 28 ರಂದು ಬಕ್ರೀದ್ ಹಬ್ಬ ಆಚರಿಸಲಾಗುವುದು ಎಂಬ ಅಧಿಕೃತ ಮಾಹಿತಿ ಲಭ್ಯವಾಗಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಮೇ 28 (ಗುರುವಾರ) ಮಾತ್ರ ಸಾರ್ವಜನಿಕ ರಜೆ ಎಂದು ಘೋಷಿಸಿದೆ. ಇದರೊಂದಿಗೆ ಈ ಹಿಂದೆ ನೀಡಲಾಗಿದ್ದ ಮೇ 26 ಮತ್ತು 27ರ ರಜೆಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದ್ದು, ಆ ಎರಡು ದಿನಗಳು ಸರ್ಕಾರಿ ಕಚೇರಿಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಾಮಾನ್ಯ ಕೆಲಸದ ದಿನಗಳಾಗಿರಲಿವೆ ಎಂದು ಸ್ಪಷ್ಟಪಡಿಸಲಾಗಿದೆ.

ಪ್ರಾಣಿ ಬಲಿ ನಿಯಮಾವಳಿ ಎತ್ತಿ ಹಿಡಿದ ಕಲ್ಕತ್ತಾ ಹೈಕೋರ್ಟ್:

ಇನ್ನೊಂದೆಡೆ, ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಪ್ರಾಣಿ ಬಲಿ ಪ್ರಕ್ರಿಯೆಯನ್ನು ನಿಯಂತ್ರಿಸಲು ಸರ್ಕಾರ ಜಾರಿಗೆ ತಂದಿದ್ದ ಕಠಿಣ ಮಾರ್ಗಸೂಚಿಗಳನ್ನು ಕಲ್ಕತ್ತಾ ಹೈಕೋರ್ಟ್ ಎತ್ತಿಹಿಡಿದಿದೆ. ಪಶ್ಚಿಮ ಬಂಗಾಳ ಪ್ರಾಣಿ ಬಲಿ ನಿಯಂತ್ರಣ ಕಾಯ್ದೆ 1950ರ ಅಡಿಯಲ್ಲಿ, ಕೇವಲ 14 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಪ್ರಾಣಿಗಳನ್ನು ಮಾತ್ರ ಬಲಿ ನೀಡಲು ಅವಕಾಶವಿದ್ದು, ಅದಕ್ಕೆ ಪಶುವೈದ್ಯರು ಹಾಗೂ ಸ್ಥಳೀಯ ಸಂಸ್ಥೆಗಳ ಜಂಟಿ ಪ್ರಮಾಣಪತ್ರ ಕಡ್ಡಾಯಗೊಳಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಗೋಹತ್ಯೆ ಮಾಡುವುದನ್ನು ನಿಷೇಧಿಸಿರುವ ಸರ್ಕಾರದ ನಿರ್ಧಾರಕ್ಕೆ ತಡೆ ನೀಡಲು ಕೋರ್ಟ್ ನಿರಾಕರಿಸಿದೆ. ಈ ವೇಳೆ ನ್ಯಾಯಾಲಯವು, ''ಹಸುಗಳನ್ನು ಬಲಿ ಕೊಡುವುದು ಈದ್ ಹಬ್ಬದ ಕಡ್ಡಾಯ ಅಥವಾ ಅತ್ಯಗತ್ಯ ಭಾಗವಲ್ಲ'' ಎಂದು ಸುಪ್ರೀಂ ಕೋರ್ಟ್‌ನ ಹಳೆಯ ಆದೇಶಗಳನ್ನು ಉಲ್ಲೇಖಿಸಿ ಮಹತ್ವದ ವೀಕ್ಷಣೆ ಮಾಡಿದೆ.

ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆ ಏರಿಕೆ ಮತ್ತು ತೈಲ ಕಂಪನಿಗಳ ನಷ್ಟ ತಗ್ಗಿಸಲು ಕ್ರಮ

ಮೂರನೇ ಬಾರಿಗೆ ಪೆಟ್ರೋಲ್, ಡೀಸೆಲ್ ದರ ಏರಿಕೆ

• ಪ್ರಜೋದಯ ವರದಿ

ನವದೆಹಲಿ: ದೇಶದಲ್ಲಿ ದೀರ್ಘಕಾಲದವರೆಗೆ ಸ್ಥಿರವಾಗಿದ್ದ ಇಂಧನ ದರಗಳಿಗೆ ಈಗ ಜಾಗತಿಕ ಮಾರುಕಟ್ಟೆಯ ಬಿಸಿ ತಟ್ಟಿದೆ. ಶನಿವಾರದ ತೈಲ ಕಂಪನಿಗಳ ನಿರ್ಧಾರದಂತೆ ಪೆಟ್ರೋಲ್ ಬೆಲೆ ಲೀಟರ್‌ಗೆ 87 ಪೈಸೆ ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 91 ಪೈಸೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 107.14 ರೂ. ಆಗಿದ್ದು ಡೀಸೆಲ್ ಬೆಲೆ 95.04 ರೂ. ಆಗಿದೆ.

ಮೇ ತಿಂಗಳಲ್ಲಿ ಮೂರನೇ ಬಾರಿ ಏರಿಕೆ ಇತ್ತೀಚಿನ ದಿನಗಳಲ್ಲಿ ತೈಲ ಕಂಪನಿಗಳು ಗ್ರಾಹಕರ ಮೇಲೆ ಸತತವಾಗಿ ಇಂಧನ ಹೊರೆಯನ್ನು ಹಾಕುತ್ತಿವೆ. ಈ ವಾರದ ಆರಂಭದಲ್ಲಷ್ಟೇ ಲೀಟರ್ ಇಂಧನಕ್ಕೆ 90 ಪೈಸೆ ಹೆಚ್ಚಿಸಲಾಗಿತ್ತು. ಅದಕ್ಕೂ ಮೊದಲು ತೈಲ ಮಾರುಕಟ್ಟೆ ಕಂಪನಿಗಳು ಪ್ರತಿ ಲೀಟರ್‌ಗೆ ಒಮ್ಮೆಗೆ ಸುಮಾರು 3 ರೂ.ಗಳಷ್ಟು ದರಗಳನ್ನು ಹೆಚ್ಚಿಸುವ ಮೂಲಕ ದೀರ್ಘಾವಧಿಯ ಬೆಲೆ ಸ್ಥಿರತೆಗೆ ಬ್ರೇಕ್ ಹಾಕಿದ್ದವು. ಇತ್ತೀಚಿನ ಈ ಪರಿಷ್ಕರಣೆಯಿಂದಾಗಿ ರಾಷ್ಟ್ರ ರಾಜಧಾನಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 97.77 ರೂ.ಗಳಿಂದ 98.64 ರೂ.ಗಳಿಗೆ ತಲುಪಿದೆ.

ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 87 ಪೈಸೆ ಏರಿಕೆಯಾಗಿ, 98.64 ರೂ.ಗಳಿಂದ 99.51 ರೂ.ಗಳಿಗೆ ತಲುಪಿದೆ. ಡೀಸೆಲ್ ಬೆಲೆ ಲೀ.ಗೆ 91 ಪೈಸೆ ಏರಿಕೆಯಾಗಿ 91.58 ರೂ.ಗಳಿಂದ 92.49 ರೂ.ಗಳಿಗೆ ತಲುಪಿದೆ. ಕೋಲ್ಕತ್ತಾದಲ್ಲಿ ಪೆಟ್ರೋಲ್ 110.57 ರೂ. ಡೀಸೆಲ್ 96.04 ರೂ. ಆಗಿದೆ. ಮುಂಬೈನಲ್ಲಿ ಪೆಟ್ರೋಲ್ 107.56 ರೂ. ಡೀಸೆಲ್, 94.05 ರೂ.ಚೆನ್ನೈನಲ್ಲಿ ಪೆಟ್ರೋಲ್ 104.54 ರೂ. ಡೀಸೆಲ್ 96.16 ರೂ. ಆಗಿದೆ.

ದರ ಏರಿಕೆಗೆ ಅಸಲಿ ಕಾರಣವೇನು? ಮಧ್ಯಪ್ರಾಚ್ಯದಲ್ಲಿ ತಲೆದೂರಿರುವ ಯುದ್ಧದ ವಾತಾವರಣ ಮತ್ತು ಯುಎಸ್–ಇರಾನ್ ನಡುವಿನ ಶಾಂತಿ ಮಾತುಕತೆಗಳ ಸುತ್ತಲಿನ ಅನಿಶ್ಚಿತ



ತೆಯೇ ಈ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ತೀವ್ರ ಏರಿಳಿತ ಕಾಣುತ್ತಿವೆ. ಶುಕ್ರವಾರ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 104 ಡಾಲರ್ ಗಿಂತ ಹೆಚ್ಚಾಗಿದ್ದರೆ, ಯುಎಸ್ ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೇಟ್ ಕಚ್ಚಾ ತೈಲವು ಬ್ಯಾರೆಲ್‌ಗೆ 97 ಡಾಲರ್ ಆಸುಪಾಸಿನಲ್ಲಿ ವಹಿವಾಟು ನಡೆಸಿದೆ. ಜಾಗತಿಕ ಪೂರೈಕೆಯ ಕಳವಳಗಳ ಮಧ್ಯೆ ಒಂದು ಹಂತದಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಬರೋಬ್ಬರಿ 111 ಡಾಲರ್‌ಗೆ ತಲುಪಿತ್ತು.

ತೈಲ ಕಂಪನಿಗಳಿಗೆ ಆಗ್ತಿದ್ದ ಭಾರಿ ನಷ್ಟ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಸತತವಾಗಿ ಏರುತ್ತಿದ್ದರೂ, ಭಾರತದ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು ತಿಂಗಳುಗಳಿಂದ ದೇಶೀಯ ಇಂಧನ ಬೆಲೆಗಳನ್ನು ಬದಲಾಯಿಸದೆ ಗ್ರಾಹಕರಿಗೆ ನೆರವಾಗಿದ್ದವು. ಆದರೆ, ಈ ಅವಧಿಯಲ್ಲಿ ಸಾರ್ವಜನಿಕ ವಲಯದ ತೈಲ ಕಂಪನಿಗಳು ಪ್ರತಿ ತಿಂಗಳು ಸುಮಾರು 1,000 ಕೋಟಿ ರೂ.ಗಳಷ್ಟು ಭಾರಿ ನಷ್ಟವನ್ನು ಅನುಭವಿಸುತ್ತಿದ್ದವು. ಹೀಗಾಗಿ ನಷ್ಟದ ಹೊರೆಯನ್ನು ತಗ್ಗಿಸಲು ಈಗ ಬೆಲೆ ಪರಿಷ್ಕರಣೆಯ ಮೂಲಕ ಆ ಹೊರೆಯ ಒಂದು ಭಾಗವನ್ನು ಗ್ರಾಹಕರ ಮೇಲೆ ವರ್ಗಾಯಿಸಲು ಕಂಪನಿಗಳು ಆರಂಭಿಸಿವೆ.

ಇಂಧನ ಆಘಾತ ಎದುರಿಸಲು ಭಾರತ ಸಜ್ಜು: ಹರ್ದೀಪ್ ಸಿಂಗ್ ಪುರಿ ಇತ್ತೀಚೆಗೆ ನಡೆದ ಸಿಐಐ ವಾರ್ಷಿಕ ವ್ಯವಹಾರ ಶೃಂಗಸಭೆ 2026 ರಲ್ಲಿ ಮಾತನಾಡಿದ್ದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು, ಜಾಗತಿಕ ಅಡೆತಡೆಗಳು ಮತ್ತು ಏರುತ್ತಿರುವ ಕಚ್ಚಾ ತೈಲ ಬೆಲೆಗಳ ಹೊರತಾಗಿಯೂ ಬಲವಾದ ನೀತಿ ಸಮನ್ವಯದ ಮೂಲಕ ಭಾರತವು ಸ್ಥಿರ ಇಂಧನ ಪೂರೈಕೆಯನ್ನು ಖಚಿತಪಡಿಸಿದೆ ಎಂದು ಹೇಳಿದ್ದರು.

ಯಾವುದೇ ಕೊರತೆಯಾಗದಂತೆ ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿಯ ತಡೆರಹಿತ ಲಭ್ಯತೆ ಯನ್ನು ಖಚಿತಪಡಿಸಲಾಗಿದ್ದು, ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನು ಗಮನಾರ್ಹವಾಗಿ ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದ್ದರು. ಆದಾಗ್ಯೂ, ಪ್ರಸ್ತುತ ಜಾಗತಿಕ ಒತ್ತಡ ಹೆಚ್ಚಾಗಿರುವುದರಿಂದ ದೇಶೀಯ ಮಾರುಕಟ್ಟೆಯಲ್ಲಿ ಸಣ್ಣ ಪ್ರಮಾಣದ ಬೆಲೆ ಏರಿಕೆಯು ಅನಿವಾರ್ಯವಾಗಿದೆ.

ಅಪಾಯಕ್ಕೆ ಆಹ್ವಾನಿಸುತ್ತಿರುವ ಮರ ತೆರವಿಗೆ ಒತ್ತಾಯ

ಬುಡ ಸಮೇತ ರಸ್ತೆಗೆ ಉರುಳುವ ಆತಂಕ

• ಪ್ರಜೋದಯ ವರದಿ

ಸಕಲೇಶಪುರ: ಹಾನುಬಾಳು ಹೋಬಳಿ ಕೇಂದ್ರದಿಂದ ಹಾದಿಗೆ, ಮದನಾಪುರ ಹಾಗು ಹಾನುಬಾಳುಕೂಡಿಗೆ ಸಂತೆ ಸಂಪರ್ಕಿಸುವ ರಸ್ತೆಯ ಪಕ್ಕದಲ್ಲಿರುವ ಬೃಹತ್ ಮರ ಯಾವ ಕ್ಷಣದಲ್ಲಾದರೂ ಬುಡ ಸಮೇತ ರಸ್ತೆಗೆ ಉರುಳುವ ಆತಂಕ ಎದುರಾಗಿದೆ.

ಕೆಲ ದಿನಗಳಿಂದ ಸುರಿಯುತ್ತಿರುವ ಮಳೆ ಹಾಗು ಗಾಳಿಯಿಂದ ಮರದ ಬುಡದ ಭಾಗ ದುರ್ಬಲಗೊಂಡಿದೆ. ಈಗಾಗಲೇ ರಸ್ತೆಯ ಅಂಚು ಕುಸಿಯುತ್ತಿದ್ದು, ಮರ ನೆಲಕ್ಕುರುಳಿದರೆ ರಸ್ತೆಯ ಸುಮಾರು ಅರ್ಧ ಭಾಗವೇ ಕುಸಿದು ಬೀಳುವ ಸಾಧ್ಯತೆ ಇದೆ.

ಈ ರಸ್ತೆ ಹಾದಿಗೆ, ಮದನಾಪುರ, ಕೂಡಿಗೆ ಸಂತೆ ಸೇರಿ ಹಲವಾರು ಗ್ರಾಮಗಳಿಗೆ ಪ್ರಮುಖ ಸಂಪರ್ಕ ಮಾರ್ಗವಾಗಿದೆ. ರಸ್ತೆ ಬಂದ್ ಆದರೆ ಜನರ ಸಂಚಾರ, ವಿದ್ಯಾರ್ಥಿಗಳ ಓಡಾಟ, ಕೃಷಿ ಚಟುವಟಿಕೆ ಹಾಗು ತುರ್ತು ಸೇವೆಗಳ ಮೇಲೂ ಗಂಭೀರ ಪರಿಣಾಮ ಬೀಳಲಿದೆ. ಸ್ಥಳೀಯ ನಿವಾಸಿಗಳು ಹಾಗೂ ವಾಹನ ಸವಾರರು ಈಗಾಗಲೇ ಆತಂಕದ

ನಡುವೆ ಸಂಚರಿಸುತ್ತಿದ್ದಾರೆ. ರಾತ್ರಿ ವೇಳೆ ಹಾಗೂ ಭಾರೀ ಮಳೆಯ ಸಂದರ್ಭಗಳಲ್ಲಿ ರಸ್ತೆಯಲ್ಲಿ ಸಂಚಾರ ಮಾಡುವುದು ಅಪಾಯಕಾರಿಯಾಗಿದೆ.

ಮರದ ಬುಡ ಸಂಪೂರ್ಣ ಸಡಿಲಗೊಂಡಿದೆ. ಯಾವುದೇ ಕ್ಷಣದಲ್ಲಿ ಕುಸಿಯುವ ಪರಿಸ್ಥಿತಿ ಇದೆ. ದೊಡ್ಡ ಅನಾಹುತ ಸಂಭವಿಸುವ ಮೊದಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟ ಇಲಾಖೆ ತುರ್ತು ಕ್ರಮ ಕೈಗೊಂಡು ಮರ ತೆರವು, ರಸ್ತೆ ಭದ್ರತೆ ತಡೆಗೋಡೆ ನಿರ್ಮಿಸಬೇಕು. ಮಳೆಗಾಲ ತೀವ್ರವಾಗುತ್ತಿರುವ ಹಿನ್ನಲೆ ಅಧಿಕಾರಿಗಳು ವಿಳಂಬ ಮಾಡದೆ ಕಾರ್ಯಪ್ರವೃತ್ತರಾಗ ಬೇಕೆಂದು ಎಂದು ಸ್ಥಳೀಯರು ಆಗ್ರಹಿಸಿದ್ದಾರಲ್ಲದೆ, ಪ್ರತಿಭಟನೆಯ ಎಚ್ಚರಿಕೆಯನ್ನೂ ನೀಡಿದ್ದಾರೆ.

ಈ ಬಗ್ಗೆ ಆರ್‌ಎಫ್‌ಒ ಹೇಮಂತ್ ಅವರು ಪ್ರತಿಕ್ರಿಯಿಸಿ, ಶೀಘ್ರದಲ್ಲೇ ಸ್ಥಳ ಪರಿಶೀಲಿಸಿ ಅಗತ್ಯ ಹಾಗು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ.

ಟಿ-20 ನಾಯಕ ಸ್ಥಾನ: ಗಂಭೀರ್ ಕೈಯಲ್ಲಿ ಸೂರ್ಯ ಭವಿಷ್ಯ

ನವದೆಹಲಿ: ಭಾರತದ ಟಿ-20 ನಾಯಕನಾಗಿ ಸೂರ್ಯಕುಮಾರ್ ಯಾದವ್ ಅವರ ಭವಿಷ್ಯವನ್ನು ಪ್ರಮುಖವಾಗಿ ಮುಖ್ಯ ತರಬೇತುದಾರ ಗೌತಮ್ ಗಂಭೀರ್ ನಿರ್ಧರಿಸಲಿದ್ದಾರೆ ಬಿಸಿಸಿಐನ ಮೂಲವೊಂದು ತಿಳಿಸಿದೆ.

ಆದರೆ ಆಯ್ಕೆ ಸಮಿತಿಯು ಅವರ ಜಾಗಕ್ಕೆ ಬೇರೆಯವರನ್ನು ನೇಮಿಸಲು ಉತ್ಸುಕವಾಗಿದೆ ಎಂದು ಗೊತ್ತಾಗಿದೆ. ಗಂಭೀರ್ ಹಾಗೂ ಸೂರ್ಯಕುಮಾರ್ ನಡುವೆ ಉತ್ತಮ ಬಾಂಧವ್ಯವಿದ್ದು, ಸೂರ್ಯಕುಮಾರ್ ಅವರ ಭವಿಷ್ಯ ಗಂಭೀರ್ ಅವರ ಕೈಯಲ್ಲಿದೆ ಎಂದು ಮೂಲಗಳು ಹೇಳಿವೆ.

ತಂಡದಿಂದಲೂ ಸೂರ್ಯ ಅವರನ್ನು ಕೈಬಿಡಬೇಕೆಂದು ಐದೂ ಜನ ಆಯ್ಕೆಗಾರರು ಬಯಸಿದ್ದಾರೆ. ಭಾರತದ ಕ್ರಿಕೆಟ್ ಭವಿಷ್ಯದ ದೃಷ್ಟಿಯಿಂದ ಅವರು ನಿರ್ಧಾರ ತೆಗೆದುಕೊಳ್ಳಲಿದ್ದಾರೆಂದು ಹೇಳಿದ್ದಾರೆ. ಸೂರ್ಯ ಐಪಿಎಲ್‌ನಲ್ಲಿ 12 ಇನ್ನಿಂಗ್ಸ್‌ಗಳಿಂದ 148ರ ಸ್ಟ್ರೈಕ್ ರೇಟ್‌ನಲ್ಲಿ ಕೇವಲ 210 ರನ್ ಗಳಷ್ಟೇ ಗಳಿಸಿದ್ದಾರೆ.

ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

943 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ | 75 ಎಕರೆ ವಿಸ್ತೀರ್ಣ

• ಪ್ರಜೋದಯ ವರದಿ

ಬೆಂಗಳೂರು: ಇಲ್ಲಿನ ಸೂರ್ಯ ನಗರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುವ ಮೂಲಕ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿ ಯಿಂದ ಭಾಗದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ವಸತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ ಜಂಟಿಯಾಗಿ ಸೂರ್ಯಗ್ರಾಮದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಶಂಕುಸ್ಥಾಪನೆ, ಮುಖ್ಯಮಂತ್ರಿಗಳ ನಮ್ಮ ಮನೆ ಯೋಜನೆಗೆ ಚಾಲನೆ, ಸೂರ್ಯಶೈನ್, ಸೂರ್ಯ ಡಿವೈನ್ ವಸತಿ ಸಮುಚ್ಚಯ ಕಾಮಗಾರಿಗಳ ಶಂಕುಸ್ಥಾಪನೆ, ವಸತಿ ಯೋಜನೆಗೆ ಭೂಮಿ ನೀಡಿದ ಭೂ ಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಲ್ಲಿಯವರೆಗೂ ಕೇವಲ ವಸತಿ ನಿರ್ಮಾಣ ಮಾಡುತ್ತಿದ್ದ ವಸತಿ ಇಲಾಖೆ ಮತ್ತು ಈಗ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ಪ್ರಗತಿಯ ದೂರದೃಷ್ಟಿಯಾಗಿದೆ. ಅದಕ್ಕಾಗಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಮತ್ತು ವಸತಿ ಸಚಿವ ಜಮೀರ್ ಅಹಮದ್ ಅಭಿನಂದನಾರ್ಹರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗುಜರಾತ್‌ನಲ್ಲಿರುವ ಕ್ರೀಡಾಂಗಣ 90 ಸಾವಿರ ಆಸನ ವ್ಯವಸ್ಥೆ ಹೊಂದಿದೆ. ನಮ್ಮ ರಾಜ್ಯದ್ದು ಎರಡನೇ ದೊಡ್ಡ ಕ್ರೀಡಾಂಗಣವಾಗಿದೆ. ಇದರಿಂದ ಪ್ರವಾಸೋದ್ಯಮದ ಪ್ರಗತಿಯ ಜೊತೆಗೆ ಸುತ್ತ ಮುತ್ತ ಊರುಗಳ ಆರ್ಥಿಕತೆಯೂ ಹೆಚ್ಚುತ್ತದೆ. ಉದ್ಯೋಗವೂ ಹೆಚ್ಚುತ್ತದೆ. ಸರ್ಕಾರದ ಆರ್ಥಿಕ ನೆರವಿಲ್ಲದೆ ಕೆಹೆಚ್‌ಬಿ ಹಣದಿಂದಲೇ ಕ್ರೀಡಾಂಗಣ ನಿರ್ಮಾಣ ಆಗಲಿದೆ ಎಂದು ಶಿವಲಿಂಗೇಗೌಡರು ಹೇಳಿದ್ದಾರೆಂದು ಮುಖ್ಯಮಂತ್ರಿ ಉಲ್ಲೇಖಿಸಿದರು.

ಖಾಲಿ ಇರುವ ನಿವೇಶನಗಳ ಮಾರಾಟದಿಂದ ಕೆಹೆಚ್‌ಬಿಗೆ 20 ಸಾವಿರ ಕೋಟಿ ರೂ. ಆದಾಯ ಬರುವ ಅಂದಾಜಿದೆ. ನೆತ್ತಿ ಮೇಲೆ ಸೂರು ಇರಬೇಕು ಎನ್ನುವುದು ಪ್ರತಿಯೊಬ್ಬರ ಆಸೆ. ಈಗ ಭೂಮಿ ಬೆಲೆ ಹೆಚ್ಚುತ್ತಿರುವುದರಿಂದ ಬಡ, ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ನಿವೇಶನಗಳನ್ನು ನಿರ್ಮಿಸಿ ಒದಗಿಸುತ್ತಿದೆ ಎಂದರು.

ಈ ಭಾಗದ ಅಭಿವೃದ್ಧಿಗೆ ಪೂರಕವಾಗಿ ಜಿಗಣಿ ಹೋಬಳಿಯ ಪ್ರಮುಖ ಸಂಪರ್ಕ ರಸ್ತೆ ನಿರ್ಮಾಣಕ್ಕೂ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಧಿಕಾರಿಗಳು ಈ ಕೆಲಸವನ್ನೂ ಆರಂಭಿಸುತ್ತಾರೆ. ಕ್ರೀಡಾಂಗಣ, ರಸ್ತೆ ಮಾತ್ರವಲ್ಲದೆ ವಸತಿ ಇಲಾಖೆ ಈ ಬಾರಿ ಇಲ್ಲಿಯವರೆಗೂ 3 ಲಕ್ಷಕ್ಕೂ ಹೆಚ್ಚು ಮನೆ ಮತ್ತು ನಿವೇಶನಗಳನ್ನೂ ರಾಜ್ಯದಲ್ಲಿ ನೀಡಲಾಗಿದೆ. ಹೀಗಾಗಿ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿಯಿಂದ ಸಮಗ್ರ ಅಭಿವೃದ್ಧಿಗೆ ನಾವು ನಾಂದಿ ಹಾಡಿದ್ದೇವೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ವಸತಿ ಸಚಿವ ಜಮೀರ್ ಅಹಮದ್, ಕೆಹೆಚ್‌ಬಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಶಾಸಕರಾದ ಆನೇಕಲ್ ಶಿವಣ್ಣ, ಟಿ.ಬಿ.ಜಯಚಂದ್ರ, ಕೃಷ್ಣಪ್ಪ, ಮಾಜಿ ಸಂಸದ ಡಿ.ಕೆ.ಸುರೇಶ್, ಕೊಳೇಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಬ್ಬಯ್ಯ, ರಾಮೋಜಿಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಇತರರಿದ್ದರು.

ಅಂತಾರಾಷ್ಟ್ರೀಯ ಕ್ರೀಡಾಂಗಣದ ವಿಶೇಷತೆ

90 ಸಾವಿರ ಆಸನವುಳ್ಳ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ, ಹಗಲು-ರಾತ್ರಿ ಪಂದ್ಯಗಳಿಗೆ ಬೆಳಕಿನ ವ್ಯವಸ್ಥೆ, ನಾಲ್ಕು ತಂಡಗಳ ಆಟಗಾರರಿಗೆ ಲಾಕರ್ ರೂಂ ಮತ್ತು ಸೌಲಭ್ಯ, ಒಳಾಂಗಣ ಮತ್ತು ಹೊರಾಂಗಣ ಅಭ್ಯಾಸ ಮೈದಾನ ಹಾಗೂ ನೆಟ್‌ಗಳು, ಪಂದ್ಯ ಅಧಿಕಾರಿಗಳಿಗೆ ಸೌಲಭ್ಯಗಳು, ವಿಐಪಿ ಲಾಂಜ್, ಕಾರ್ಪೋರೆಟ್ ಬಾಕ್ಸ್ ಮತ್ತು ಅಧ್ಯಕ್ಷೀಯ ಸೂಟ್, ಮಾಧ್ಯಮ ವಿಭಾಗ ಮತ್ತು ಪತ್ರಿಕಾ ವಿಭಾಗ, ಪ್ರೇಕ್ಷಕರಿಗೆ ಅಗತ್ಯ ಸೌಲಭ್ಯಗಳು ಮತ್ತು ಇತರೆ ಅಭಿವೃದ್ಧಿ ಕಾಮಗಾರಿ, ಜಮೀನಿನ ವಿಸ್ತೀರ್ಣ ಒಟ್ಟು 75 ಎಕರೆ, ಯೋಜನೆಗೆ ಮೀಸಲಿಟ್ಟಿರುವ ಮೊತ್ತ 943.46 ಕೋಟಿ ರೂ., 500 ವಾಹನಗಳಿಗೆ ಬಹುಮಹಡಿ ವಾಹನಗಳ ನಿಲುಗಡೆ ವ್ಯವಸ್ಥೆ, ವಾಣಿಜ್ಯ, ಚಿಲ್ಲರೆ ವ್ಯಾಪಾರ ಸಂಕೀರ್ಣ, ಕ್ರೀಡಾ ಅಂಗಡಿ, ಉಪಹಾರ ಗೃಹ, ಆಟಗಾರರು, ಕೋಚ್ ಹಾಗೂ ಸಿಬ್ಬಂದಿಗೆ ವಸತಿ ಸೌಲಭ್ಯ, ರಸ್ತೆ, ಹೆಲಿಪ್ಯಾಡ್, ಸಾರ್ವಜನಿಕ ಪ್ಲಾಜಾ, ಹಸಿರು ಪ್ರದೇಶ ಹಾಗೂ ಪಾರ್ಕಿಂಗ್ ಸೌಲಭ್ಯ.

ಫಾರಂ-57ರ ಬಗರ್ ಹುಕುಂ ಭೂಮಿ ಕನಸು ಭಗ್ನ

» ಮೊದಲನೇ ಪುಟದಿಂದ

ಅರಣ್ಯ ಭೂಮಿಯನ್ನು ಯಾವುದೇ ಪರಿಸ್ಥಿತಿಯಲ್ಲೂ ಸಕ್ರಮಗೊಳಿಸಲು ಅವಕಾಶ ಇಲ್ಲ ಎಂದು ರಾಜ್ಯ ಸರ್ಕಾರ ಇತ್ತೀಚೆಗೆ ಪುನರುಚ್ಚರಿಸಿದೆ. ಅರಣ್ಯ ಮತ್ತು ಕಂದಾಯ ಭೂಮಿ ಒಂದೇ ಸರ್ವೆ ನಂಬರ್ ನಲ್ಲಿದ್ದರೆ ಜಂಟಿ ಸರ್ವೆ ನಡೆಸುವಂತೆ ಸೂಚಿಸಲಾಗಿದೆ. ಕೆಲ ಪ್ರಕರಣ ಗಳಲ್ಲಿ ಗೋಮಾಳ ಭೂಮಿ ಲಭ್ಯವಿಲ್ಲವೆಂಬ ಕಾರಣವನ್ನೂ ಉಲ್ಲೇಖಿಸಿ ಫಾರಂ-57 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ರೈತರಲ್ಲಿ ಹೆಚ್ಚುತ್ತಿರುವ **ಅಸಮಾಧಾನ:** ಫಾರಂ-50 ಮತ್ತು 53ರಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದ ರೈತರಿಗೆ ಫಾರಂ-57 ಕೊನೆಯ ಅವಕಾಶವೆಂಬ ನಿರೀಕ್ಷೆ ಇತ್ತು. ಹಲವು ಗ್ರಾಮಗಳಲ್ಲಿ ದಶಕಗಳಿಂದ ಕೃಷಿ ಮಾಡಿಕೊಂಡಿದ್ದರೂ, ಕಾನೂನುಬದ್ಧ ದಾಖಲೆಗಳಿಲ್ಲದೆ ಬದುಕುತ್ತಿದ್ದ ಕುಟುಂಬಗಳು ಈ ಯೋಜನೆಯತ್ತ ಕಾದಿದ್ದವು. ಬಹುತೇಕ ಅರ್ಜಿಗಳು ತಿರಸ್ಕಾರಗೊಂಡ ಹಿನ್ನಲೆ ರೈತ ಸಂಘಟನೆಗಳು ಹಾಗು ಗ್ರಾಮೀಣ ಭಾಗದ ಜನರು ಅರ್ಜಿ ಮರುಪರಿಶೀಲನೆಗೆ ಒಳಪಡಿಸುವಂತೆ ಒತ್ತಾಯಿಸಿದ್ದಾರೆ.

ಭಾರತ್ ಗ್ಯಾಸ್ ಏಜೆನ್ಸಿ ಎದುರು ಜನದಟ್ಟಣೆ: ಸಿಮೆಂಟ್ ಮಂಜು ದೌಡು

» ಮೊದಲನೇ ಪುಟದಿಂದ

ಅವರು, ಗ್ರಾಹಕರು ಸಿಲಿಂಡರ್ ಬುಕ್ ಮಾಡಿದ 45 ದಿನದಲ್ಲಿ ತಪ್ಪದೇ ವಿತರಣೆ ಮಾಡಲಾಗುವುದು. ತಮ್ಮ ಸರದಿ ಬರುವವರೆಗೂ ಅನ್ಯತಾ ಕಚೇರಿ ಬಳಿ ಹೋಗಿ ಸಮಯ ವ್ಯರ್ಥ ಮಾಡಿಕೊಳ್ಳಬಾರದು. ಈ ಹಿಂದೆ ಇದ್ದಂತೆ ತಕ್ಷಣ ಎಲ್‌ಪಿಜಿ ದೊರಕುವುದಿಲ್ಲ. ತಮ್ಮ ಬೇಡಿಕೆಗೆ ಅನುಗುಣವಾಗಿ ನಿಯಮಾನುಸಾರ ಗ್ಯಾಸ್ ಸಿಲಿಂಡರ್ ವಿತರಣೆ ಮಾಡಲಾಗುವುದೆಂದರು.

ಪಾಶ್ಚಿಮಾತ್ಯ ದೇಶದಲ್ಲಿ ಯುದ್ಧ ಪ್ರಾರಂಭವಾದ ನಂತರ ಗ್ಯಾಸ್ ವಿತರಣೆಯಲ್ಲಿ ವ್ಯತ್ಯಾಸ ವಾಗಿರುವುದು ನಿಜ. ಯುದ್ಧ ಪ್ರಾರಂಭವಾಗುವ ಮೊದಲು ಸಕಾಲಕ್ಕೆ ಗ್ಯಾಸ್ ದೊರಕುತ್ತಿತ್ತು. ಈಗ ಸಿಲಿಂಡರ್ ಪ್ರಮಾಣ ಕಡಿಮೆ ಬರುತ್ತಿರುವುದರಿಂದ ಬುಕ್ ಮಾಡಿದ 45 ದಿನಗಳಲ್ಲಿ ಸಿಲಿಂಡರ್ ವಿತರಣೆ ಮಾಡಲಾಗುವುದು. ಏಜೆನ್ಸಿ ಕಚೇರಿಯಲ್ಲಿ ಪ್ರತಿದಿನ ಸಿಲಿಂಡರ್ ಪಡೆಯುವವರ ಹೆಸರು, ಮೊಬೈಲ್ ಸಂಖ್ಯೆ ನಮೂದಿಸಿದ ಪಟ್ಟಿ ಪ್ರದರ್ಶಿಸಬೇಕು. ಈವರೆಗೆ ಆಗಿರುವ ಲೋಪವನ್ನು ಸರಿಪಡಿಸಿಕೊಂಡು ನಿಯಮಾನುಸಾರ ಸಿಲಿಂಡರ್‌ಗಳನ್ನು ವಿತರಣೆ ಮಾಡಬೇಕು. ಭವಿಷ್ಯದಲ್ಲಿ ಸಮಸ್ಯೆ ಎದುರಾಗದಂತೆ ಕ್ರಮ ವಹಿಸಬೇಕು. ಸಮಸ್ಯೆ ಬಗೆಹರಿದ ನಂತರ ಮನೆ ಗಳ ಬಳಿಗೆ ಸಿಲಿಂಡರ್ ವಿತರಿಸಲಾಗುವುದು ಎಂದು ಸೂಚಿಸಿದರು.

ಬೇಲಿ ದಾಟಲು ಕಾಫಿ ಗಿಡಗಳನ್ನೇ ಕಿತ್ತೆಸೆದ ಕಾಡಾನೆಗಳು

• ಪ್ರಜೋದಯ ವರದಿ

ಅರೇಹಳ್ಳಿ: ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ಹೊಸಮನೆ ಗ್ರಾಮದಲ್ಲಿ ಕಾಡಾನೆಗಳ ಹಾವಳಿ ರೈತರಲ್ಲಿ ಆತಂಕ ಮೂಡಿಸಿದ್ದು ಐದು ಕಾಡಾನೆಗಳ ಗುಂಪು ತೋಟದಲ್ಲಿ ಅಳವಡಿಸಿದ್ದ ಸೋಲಾರ್ ವಿದ್ಯುತ್ ತಂತಿ ಬೇಲಿಯನ್ನು ದಾಟಲು ಕಾಫಿ ಗಿಡಗಳನ್ನು ಕಿತ್ತೆಸೆದು ಹಾಕಿ ದಾಟಿವೆ.

ಹೊಸಮನೆ ಗ್ರಾಮದ ಶ್ರೀನಿವಾಸ್ ಅವರಿಗೆ ಸೇರಿದ ತೋಟದಲ್ಲಿ ಮೂರು ಆನೆ ಹಾಗು ಎರಡು ಮರಿಗಳಿದ್ದ ಗುಂಪು ಕಾಣಿಸಿಕೊಂಡಿತ್ತು. ಪಕ್ಕದ ಜಮೀನಿಗೆ ತೆರಳಲು ಅಡ್ಡಿಯಾಗಿದ್ದ ಸೋಲಾರ್ ವಿದ್ಯುತ್ ತಂತಿ ಬೇಲಿಯನ್ನು ದಾಟಲು ಕಾಡಾನೆಗಳು ತಮ್ಮ ಚಾಣಾಕ್ಷತನ ಪ್ರದರ್ಶಿಸಿ ಐವತ್ತಕ್ಕೂ ಹೆಚ್ಚು ಕಾಫಿ ಗಿಡಗಳು ಹಾಗು ಇತರ ಸಣ್ಣ ಮರಗಿಡಗಳನ್ನು ಕಿತ್ತು ತಂತಿ ಬೇಲಿಯ ಮೇಲೆ ಹಾಕಿ ನಂತರ ಅದನ್ನು ದಾಟಿ ಮುಂದಕ್ಕೆ ಸಾಗಿವೆ.

ಇದೇ ವೇಳೆ ಕಾಡಾನೆಗಳನ್ನು ಓಡಿಸಲು ಮುಂದಾದ ನಾಯಿಯನ್ನು ಕಂಡ ಗುಂಪಿನಲ್ಲಿದ್ದ ಒಂಟಿ ಕಾಡಾನೆಯೊಂದು ರೋಷದಿಂದ ನಾಯಿಯ ಬೆನ್ನಟ್ಟಿದೆ. ಅದೃಷ್ಟವಶಾತ್ ಸೋಲಾರ್ ವಿದ್ಯುತ್ ಬೇಲಿಯ ರಕ್ಷಣೆಯಿಂದ ನಾಯಿ ಅಪಾಯದಿಂದ ಪಾರಾಗಿದೆ. ಈ ಘಟನೆ ಸ್ಥಳೀಯರ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡುತ್ತಿದೆ.

ಕಾಡಾನೆಗಳ ದಾಂಧಲೆಯಿಂದ ಭಯಗೊಂಡ ಗ್ರಾಮಸ್ಥರು ತಕ್ಷಣ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಪಡೆದ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಕಾಡಾನೆಗಳನ್ನು ಅರಣ್ಯ ಪ್ರದೇಶದತ್ತ ಹಿಮ್ಮೆಟ್ಟಿಸಿದ್ದಾರೆ.

ಧರ್ಮಸ್ಥಳ ಸಂಸ್ಥೆಯಿಂದ ಧರ್ಮದ ತಳಹದಿಯಲ್ಲಿ ಜನಪರ ಕಾರ್ಯ

ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

ಸಕಲೇಶಪುರ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಮಾಜಮುಖಿ ಸೇವೆಗಳ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ. ಸರ್ಕಾರಕ್ಕೂ ಸಾಧ್ಯವಾಗದ ಅನೇಕ ಜನಪರ ಕಾರ್ಯಗಳನ್ನು ಸಂಸ್ಥೆ ಪರಿಣಾಮಕಾರಿಯಾಗಿ ಮಾಡುತ್ತಿದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ತೇರಾಪಥ್ ಭವನದಲ್ಲಿ ಶನಿವಾರ ಆಯೋಜಿಸಿದ್ದ 2054ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಧರ್ಮದ ತಳಹದಿಯೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಸಮನ್ವಯಗೊಳಿಸಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಫಲಾನುಭವಿಗಳ ಆರ್ಥಿಕ, ಸಾಮಾಜಿಕ ಹಾಗು ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ರಾಜ್ಯದ ಬಡವರು, ನಿರ್ಗತಿಕರು ಹಾಗು ದುರ್ಬಲ ವರ್ಗದ ಜನರಿಗೆ ನೆರವು ನೀಡಿ ಸ್ವಾವಲಂಬಿ ಬದುಕು ಕಟ್ಟಿಕೊಡುವ ಕೆಲಸವನ್ನು ಸಂಸ್ಥೆ ನಿರಂತರವಾಗಿ ಮಾಡುತ್ತಿದೆ. ಇಂತಹ ಮಹತ್ತರ ಸೇವಾ ಕಾರ್ಯಗಳ ನಡುವೆಯೂ ಧರ್ಮಸ್ಥಳ ಹಾಗು ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಗುಂಪುಗಳು ನಡೆಸುತ್ತಿರುವ ಅಪಪ್ರಚಾರ ಮತ್ತು ಸುಳ್ಳು ಆರೋಪಗಳು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಸುಳ್ಳು ಸುದ್ದಿಗಳ ಮೂಲಕ ಭಕ್ತರ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಅಪಪ್ರಚಾರಗಳು ಎಂದಿಗೂ ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು.

ಮದ್ಯಪಾನ ತ್ಯಜಿಸಿ ನವಜೀವನಕ್ಕೆ ಕಾಲಿಟ್ಟವರು ಸಮಾಜದಲ್ಲಿ ಗೌರವಯುತ ಬದುಕು ಸಾಗಿಸಬೇಕು. ಶಿಬಿರ ಮುಗಿಸಿ ಹೋದ ಬಳಿಕ ಪುನಃ ಮದ್ಯದ ಚಟಕ್ಕೆ ಒಳಗಾಗದೇ ಕುಟುಂಬದ ಆಧಾರಸ್ತಂಭಗಳಾಗಿ, ಸಮಾಜದ ಸತ್ಪ್ರಜೆಗಳಾಗಿ ಬದುಕಬೇಕೆಂದು ಮದ್ಯವರ್ಜನ ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ರಾಜ್ಯ ಸಂಘಟನಾ ಅಧ್ಯಕ್ಷ ನಟರಾಜ್ ಬಾದಾಮಿ ಅವರು ಮಾತನಾಡಿ, ಮದ್ಯಪಾನವು ಮಹಾಪಾಪ ಮಾತ್ರವಲ್ಲ, ಕುಟುಂಬ ಮತ್ತು ಸಮಾಜವನ್ನು ಹಾಳು ಮಾಡುವ ಶಾಪವಾಗಿದೆ. ಮದ್ಯ ವ್ಯಸನವು ಸಂಬಂಧ, ಆರೋಗ್ಯ ಹಾಗೂ ವ್ಯಕ್ತಿಯ ಮಾನಮರ್ಯಾದೆಯನ್ನು ನಾಶಮಾಡುತ್ತದೆ. ಜೀವನದಲ್ಲಿ ದೊರೆತಿರುವ ಬದಲಾವಣೆಯ ಅವಕಾಶವನ್ನು ಶಿಬಿರಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ರಾಜ್ಯದಾದ್ಯಂತ ಮದ್ಯವರ್ಜನ ಶಿಬಿರಗಳನ್ನು ಆಯೋಜಿಸಲಾಗುತ್ತಿದ್ದು, ಇದುವರೆಗೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಮದ್ಯ ವ್ಯಸನದಿಂದ ಮುಕ್ತರಾಗಿ ಹೊಸ ಬದುಕಿನತ್ತಾ ಹೆಜ್ಜೆ ಇಟ್ಟಿದ್ದಾರೆಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್, ಮದ್ಯವರ್ಜನ ಶಿಬಿರದ ವ್ಯವಸ್ಥಾಪನ ಸಮಿತಿ ಅಧ್ಯಕ್ಷೆ ರೇಖಾ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೈರಮುಡಿ ಚಂದ್ರು, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ನವೀನ್ ಚಂದ್ರ ಶೆಟ್ಟಿ, ಸದಸ್ಯರಾದ ಗಿರೀಶ್, ಉಮಾನಾಥ್ ಸುವರ್ಣ, ಯೋಜನಾಧಿಕಾರಿ ರಾಜೇಶ್, ಮೇಲ್ವಿಚಾರಕ ಚಿರಂತ್ ಸೇರಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗು ಕಾರ್ಯಕರ್ತರು ಉಪಸ್ಥಿತರಿದ್ದರು.

ಅಪಘಾತ: ಮಾನವೀಯತೆ ಮೆರೆದ ಶಾಸಕ

• ಪ್ರಜೋದಯ ವರದಿ

ಆಲೂರು: ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಶಾಸಕ ಸಿಮೆಂಟ್ ಮಂಜು ಅವರು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಗೆ ನೆರವಾಗಿದ್ದಾರೆ.

ತಾಲ್ಲೂಕಿನ ಬೈರಾಪುರ ಸಮೀಪ ಕಾರು ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿತು. ಅಪಘಾತದಲ್ಲಿ ಹೋತನಹಳ್ಳಿಪುರ ಗ್ರಾಮದ ಧರ್ಮಣ್ಣ (55) ಗಂಭೀರವಾಗಿ ಗಾಯಗೊಂಡು ರಸ್ತೆಯಲ್ಲೇ ನರಳುತ್ತಿದ್ದರು. ಕಾರ್ಯನಿಮಿತ್ತ ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಶಾಸಕ ಸಿಮೆಂಟ್ ಮಂಜು ಅವರು ಅಪಘಾತ ಕಂಡ ತಕ್ಷಣ ತಮ್ಮ ವಾಹನ ನಿಲ್ಲಿಸಿ ಗಾಯಾಳುವಿನ ನೆರವಿಗೆ ಧಾವಿಸಿದರು. ವ್ಯಕ್ತಿ ಸ್ಥಿತಿ ಗಂಭೀರವಾಗಿರುವುದನ್ನು ಗಮನಿಸಿದ ಅವರು, ಆ್ಯಂಬುಲೆನ್ಸ್‌ಗಾಗಿ ಕಾಯದೆ ಗಾಯಾಳುವನ್ನು ತಮ್ಮ ಕಾರಿನಲ್ಲೇ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಗೆ ದಾಖಲಿಸಿದ ಬಳಿಕ ಗಾಯಾಳುವಿಗೆ ತಕ್ಷಣ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಸೂಚನೆ ನೀಡಿ ನೆರವಾದರು.

ಚ.ರಾ.ಪಟ್ಟಣದಲ್ಲಿ 17 ಲಕ್ಷ ರೂ. ವೆಚ್ಚದ ಬಸ್ ತಂಗುದಾಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪ್ರಯಾಣಿಕರು ಬಿಸಿಲು ಹಾಗು ಮಳೆಗಾಲದಲ್ಲಿ ಆಶ್ರಯ ಪಡೆಯಲು ಬಸ್ ತಂಗುದಾಣ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಶಾಸಕರ ಅನುದಾನದಡಿ 17 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಬಸ್ ತಂಗುದಾಣದ ಭೂಮಿಪೂಜೆ ನೆರವೇರಿಸಿ ಶನಿವಾರ ಮಾತನಾಡಿ, ಹಾಸನ, ಚಿಕ್ಕಮಗಳೂರು, ಮಂಗಳೂರು ಮತ್ತು ಗ್ರಾಮಾಂತರ ಭಾಗಕ್ಕೆ ನಿತ್ಯ ತೆರಳುವ ಸಾವಿರಾರು ಪ್ರಯಾಣಿಕರು ಇಲ್ಲಿ ತಂಗುದಾಣ ವಿಲ್ಲದೆ ಮಳೆ, ಬಿಸಿಲಿನಲ್ಲಿ ನಿಲ್ಲಬೇಕಾಗಿದೆ. ಬೇಸಿಗೆ ಹಾಗು ಮಳೆಗಾಲದಲ್ಲಿ ಪ್ರಯಾಣಿಕರು ಹಗಲು ವೇಳೆ ಬಿಸಿಲಿನ ಬೇಗೆ ತಾಳಲಾರದೆ ಸಮೀಪದ ಮರಗಳ ಬಳಿ ನಿಲ್ಲುವಂತಾಗಿದೆ. ಮಳೆ ಬಂದರೂ ಇದೇ ಸಮೀಪದ

ಪೊಲೀಸ್ ಚೌಕಿಯ ಬಳಿ ನಿಲ್ಲುವ ಸ್ಥಿತಿ ಪ್ರಯಾಣಿಕರದ್ದಾಗಿದೆ ಎಂದು ತಿಳಿಸಿದರು.

ಈಗಾಗಲೇ ಬಿಸಿಲಿನ ಪ್ರಖರತೆ ಹೆಚ್ಚಾಗಿದ್ದು ಬಸ್‌ಗಾಗಿ ಇಲ್ಲಿ ಕಾದು ನಿಲ್ಲುವುದು ಅಸಾಧ್ಯ. ಹಾಗಾಗಿ ಪ್ರಯಾಣಿಕರು ನೆರಳಿನಲ್ಲಿ ಆಶ್ರಯ ಪಡೆಯಬೇಕಿದ್ದು, ಸಾರ್ವಜನಿಕರು ಹಲವಾರು ಬಾರಿ ಮನವಿ ಮಾಡಿದ್ದರಿಂದ ಪ್ರಯಾಣಿಕರ ಅನುಕೂಲಕ್ಕಾಗಿ ಸುಸಜ್ಜಿತ ತಂಗುದಾಣ ನಿರ್ಮಿಸಲಾಗುತ್ತದೆಂದರು.

ತಾಲ್ಲೂಕಿನ ದಿಡಗ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗೆ 20 ಲಕ್ಷ ರೂ. ಅನುದಾನ ನೀಡಿದ್ದು, ಚನ್ನರಾಯಪಟ್ಟಣ ಘಟಕ ಅಭಿವೃದ್ಧಿ ಕಾಮಗಾರಿಗೆ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಅವರಿಗೆ 1 ಕೋಟಿ ರೂ. ಅನುದಾನಕ್ಕೆ ಮನವಿ ಸಲ್ಲಿಸಿದ್ದು, ಪ್ರಸಕ್ತ ವರ್ಷದಲ್ಲಿ ಅನುದಾನ ಲಭ್ಯತೆ ಆಧಾರದ ಮೇಲೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು. ಚನ್ನರಾಯಪಟ್ಟಣ ಬಸ್ ನಿಲ್ದಾಣ ಎಲ್ಲಾ ಜಿಲ್ಲೆಗಳಿಗೂ ಸಂಪರ್ಕ ಬಿಂದುವಾಗಿದ್ದು ಪ್ರತಿನಿತ್ಯ 2,000 ಕ್ಕಿಂತಲೂ ಅಧಿಕ ಬಸ್ ನಿಲ್ದಾಣಕ್ಕೆ ಆಗಮನ ನಿರ್ಗಮನವಿದ್ದು ಪ್ರಯಾಣಿಕರ ಅನುಕೂಲಕ್ಕಾಗಿ ಸಿಸಿಟಿವಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗು ಹೈಮಾಸ್ಟ್ ಅಳವಡಿಸಲಾಗಿದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು ಸಂಸ್ಥೆಯವರು ಸೂಕ್ತ ನಿರ್ವಹಣೆ ಮಾಡಬೇಕೆಂದು ಸೂಚಿಸಿದರು.

ಭೂಸೇನೆ ನಿರ್ಮಿತಿ ಕೇಂದ್ರ ಹಾಸನದ ಸಹಾಯಕ ಅಭಿಯಂತರ ಹೆಚ್.ಇ.ಸಿದ್ದೇಗೌಡ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚನ್ನರಾಯಪಟ್ಟಣ ಘಟಕದ ಘಟಕ ವ್ಯವಸ್ಥಾಪಕ ಜ್ಞಾನೇಶ್, ಸಹಾಯಕ ಸಂಚಾರಿ ನಿರೀಕ್ಷಕ ಮಲ್ಲೇಶ್, ಸಂಚಾರ ನಿಯಂತ್ರಕ ಜಗದೀಶ್ ಇತರರಿದ್ದರು.

ರಸ್ತೆ ಅಭಿವೃದ್ಧಿ ಕುರಿತು ಸಂಸದ ಚರ್ಚೆ

• ಪ್ರಜೋದಯ ವರದಿ

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರು ನವದೆಹಲಿಯಲ್ಲಿ ಸಾರಿಗೆ ಇಲಾಖೆ ಕಾರ್ಯದರ್ಶಿ ಉಮಾಶಂಕರ್ ಅವರನ್ನು ಭೇಟಿ ಮಾಡಿ ರಾಷ್ಟ್ರೀಯ ಹೆದ್ದಾರಿ-75 ಸೇರಿ ಜಿಲ್ಲೆಯಲ್ಲಿ ನಡೆಯುತ್ತಿರುವ ವಿವಿಧ ರಸ್ತೆ ಹಾಗು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ಯೋಜನೆಗಳ ಪ್ರಗತಿ, ಕಾಮಗಾರಿಗೆ ವೇಗ ಹಾಗು ಸಾರ್ವಜನಿಕರಿಗೆ ಉತ್ತಮ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮಾಡಿದರು.

2 ಲಕ್ಷ ರೂ. ಬೆಲೆಯ ಕಾಪರ್ ವೈರ್ ಕಳವು

ಹಾಸನ: ಹೊಸ ಮನೆಗೆ ಅಳವಡಿಸಿದ್ದ ಸುಮಾರು 2 ಲಕ್ಷ ರೂ. ಬೆಲೆಯ ಎಲೆಕ್ಟ್ರಿಕಲ್ ಕಾಪರ್ ವೈರ್ ಕಳವು ಮಾಡಿರುವ ಘಟನೆ ಬಿಜಿಎಸ್ ಬಡಾವಣೆಯಲ್ಲಿ ನಡೆದಿದೆ.

ದುದ್ದ ಹೋಬಳಿ ಜಿ.ಮೈಲನಹಳ್ಳಿ ಗ್ರಾಮದ ಎಂ.ಆರ್.ಲಿಂಗರಾಜು ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ. ಬುಸ್ತೇನಹಳ್ಳಿ ಬೈಪಾಸ್ ಹತ್ತಿರ ಲೇಔಟ್‌ನಲ್ಲಿ ಮನೆ ನಿರ್ಮಿಸಲಾಗುತ್ತಿದೆ. ಮೇ 19ರಂದು ಎಲ್ಲಾ ಕೋಣೆಗಳಿಗೆ ಎಲೆಕ್ಟ್ರಿಕಲ್ ವೈರ್ ಅಳವಡಿಸಿ ಸಂಜೆ ಬೀಗ ಹಾಕಿ ಕೊಂಡು ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ವೈರ್ ಕಳುವಾಗಿರುವುದು ಗೊತ್ತಾಗಿದೆ. ಮನೆಯ ಮೇಲಿಂದ ಕೆಳಗಿಳಿದು ಬಂದಿರುವ ಕಳ್ಳರು ವೈರ್ ಅನ್ನು ಕತ್ತರಿಸಿಕೊಂಡು ಹೋಗಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಡಕಲು ಮತ್ತು ಕೌಕೋಡಿ ಗ್ರಾಮಗಳ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಶಾಸಕ ಸಿಮೆಂಟ್ ಮಂಜು ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಈ ವೇಳೆ ಮಾತನಾಡಿದ ಶಾಸಕರು, ನಮ್ಮ ಕಾರ್ಯವೈಖರಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ, ಮೋದಿ ಅವರ ನಾಯಕತ್ವ ಮತ್ತು ಪಶ್ಚಿಮ ಬಂಗಾಳದ ಅಭೂತಪೂರ್ವ ಗೆಲುವನ್ನು ನೋಡಿ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮುಖಂಡರು ಮತ್ತು ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಪಕ್ಷ ಸೇರ್ಪಡೆಗೊಂಡಿದ್ದಾರೆ. ಸ್ಥಳೀಯವಾಗಿ ಪಕ್ಷವನ್ನು ಇನ್ನಷ್ಟು ಬಲಪಡಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಕಲೇಶಪುರ ಮಂಡಲ ಬಿಜೆಪಿ ಅಧ್ಯಕ್ಷ ವಳಲಹಳ್ಳಿ ಅಶ್ವತ್, ಯಸಳೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸವಿನ್, ಎಸ್.ಸಿ. ಮೋರ್ಚಾ ಮಂಡಲ ಅಧ್ಯಕ್ಷ ಸ್ಟೀವನ್‌ಪ್ರಕಾಶ್, ಪುಟ್ಟಸ್ವಾಮಿಗೌಡ, ದಿನೇಶ್, ಪರಮೇಶ್, ಅರೇಶ್ ಮಧು, ದೊಡ್ಡಯ್ಯ ಇನ್ನಿತರ ಮುಖಂಡರು ಕಾರ್ಯಕರ್ತರು ಹಾಗು ಗ್ರಾಮಸ್ಥರು ಉಪಸ್ಥಿತರಿದ್ದರು.

ನಾಳೆ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ

• ಪ್ರಜೋದಯ ವರದಿ

ಹಾಸನ: ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜನ್ಮದಿನ ಹಾಗು ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಮಹಿಳೆಯರ ಋತುಚಕ್ರ ರಜೆಯ ಅವಶ್ಯಕತೆ ಮತ್ತು ಅರಿವು ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮೇ 25 ರಂದು ಬಹುಮಾನ ವಿತರಿಸಲಾಗುವುದೆಂದು ಸಂತೋಷ್ ಲಾಡ್ ಅಭಿಮಾನಿ ಬಳಗದ ಸದಸ್ಯ ವಿನೋದ್ ಕುಮಾರ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.27 ರಂದು ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಪಿಯುಸಿ ಹಾಗು ಸ್ನಾತಕ ಪದವಿ ಹಂತದ 597 ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಪ್ರಬಂಧ ಸ್ಪರ್ಧೆಯಲ್ಲಿ ಹೆಚ್ಚು ಅಂಕ ಪಡೆದವರಿಗೆ ಹಾಗು ಈ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದಿರುವ ವಿದ್ಯಾರ್ಥಿನಿಯರಿಗೂ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮೇ 25 ರಂದು ಬೆಳಿಗ್ಗೆ 10.30ಕ್ಕೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಉದ್ಘಾಟನೆ ನೆರವೇರಿಸುವರು. ಸಂಸದ ಶ್ರೇಯಸ್ ಎಂ. ಪಟೇಲ್ ಅಧ್ಯಕ್ಷತೆ ವಹಿಸುವರು. ಪಕ್ಷದ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗುವರೆಂದು ತಿಳಿಸಿದರು.

ಪ್ರಬಂಧ ಸ್ಪರ್ಧೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಗೆ 25 ಸಾವಿರ ನಗದು ಬಹುಮಾನ ಹಾಗು ಲ್ಯಾಪ್‌ಟಾಪ್, ದ್ವಿತೀಯ ಬಹುಮಾನವಾಗಿ 10 ಸಾವಿರ ನಗದು ಮತ್ತು ಲ್ಯಾಪ್‌ಟಾಪ್, ತೃತೀಯ ಸ್ಥಾನಕ್ಕೆ 5 ಸಾವಿರ ನಗದು ಮತ್ತು ಲ್ಯಾಪ್ ಟ್ಯಾಪ್ ನೀಡಲಾಗುವುದು. ಹಾಗೆಯೇ ಅತಿಹೆಚ್ಚು ಅಂಕ ಪಡೆದ 7 ಮಂದಿ ಹೆಣ್ಣು ಮಕ್ಕಳಿಗೆ ಟ್ಯಾಬ್ ವಿತರಿಸಲು ನಿರ್ಧರಿಸಲಾಗಿದೆ. ಜೊತೆಗೆ 50 ಸಮಾಧಾನಕರ ಬಹುಮಾನ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರ ಜೊತೆಗೆ ಉಡುಗೊರೆ ನೀಡಲಾಗುವುದು ಎಂದರು.

ಮುಖಂಡರಾದ ಇಮ್ರಾನ್‌ಖಾತ್, ಮೋಹನ್, ರಾಜು, ಮೊಹಮ್ಮದ್ ಇರ್ಫಾನ್ ಇದ್ದರು.

ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಭೂಮಿ ಪೂಜೆ

ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಕ್ರಮ

• ಪ್ರಜೋದಯ ವರದಿ

ಸಕಲೇಶಪುರ: ಅಂತರ್ಜಲ ಮಟ್ಟ ಹೆಚ್ಚಿಸಿ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕೆರೆಗಳ ಅಭಿವೃದ್ಧಿ ಹಾಗು ಅಗತ್ಯ ನೀರಾವರಿ ಯೋಜನೆಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಶನಿವಾರ ಸಕಲೇಶಪುರ ತಾಲ್ಲೂಕಿನ ದೊಡ್ಡನಾಗರ ಮತ್ತು ಆಲೂರು ತಾಲ್ಲೂಕಿನ ಗಂಗರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೆರೆಗಳು ಗ್ರಾಮೀಣ ರೈತರ ಜೀವನಾಡಿಯಾಗಿದ್ದು, ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಯಿಂದಲೇ ಕೃಷಿ ಬದುಕು ಹಸನಾಗಲು ಸಾಧ್ಯವಾಗುತ್ತದೆ. ಕ್ಷೇತ್ರದ ಅನೇಕ ಭಾಗಗಳಲ್ಲಿ ರೈತರು ಇನ್ನೂ ಮಳೆಯಾಧಾರಿತ ಕೃಷಿಯನ್ನೇ ನಂಬಿಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ. ಸಾವಿರಾರು ಎಕರೆ ಪ್ರದೇಶದಲ್ಲಿ ಕೆರೆಗಳಿದ್ದರೂ ಅವುಗಳ ಸಮರ್ಪಕ ಅಭಿವೃದ್ಧಿ ಆಗದ ಕಾರಣ ಮಳೆ ಕೊರತೆಯಾದಾಗ ಬರ ಪರಿಸ್ಥಿತಿ ಎದುರಾಗುತ್ತಿದೆ ಎಂದು ಹೇಳಿದರು.

ಹಿರಿಯರ ಕಾಲದಲ್ಲಿ ಕೆರೆಗಳೇ ಜೀವಜಲದ ಮೂಲವಾಗಿದ್ದು, ಅವುಗಳ ನೆರವಿನಿಂದ ವರ್ಷಕ್ಕೆ ಮೂರು ಬೆಳೆ ಭತ್ತ ಸೇರಿ ವಿವಿಧ ಉಪಕೃಷಿಗಳನ್ನು ನಡೆಸಲಾಗುತ್ತಿತ್ತು. ಇದೀಗ ಹಲವಾರು ಕೆರೆಗಳು ಹೂಳು ತುಂಬಿಕೊಂಡು, ಒತ್ತುವರಿಗೆ ಒಳಗಾಗಿ ನೀರು ನಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಅದರಿಂದ ಜಲಮರುಪೂರಣಕ್ಕೂ ಹಿನ್ನಡೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೊಡ್ಡನಾಗರ ಗ್ರಾಮದ ತೂಬಿನ ಕೆರೆ ಹಾಗು ಗಂಗರ ಗ್ರಾಮದ ದೊಡ್ಡ ಕೆರೆ ಅಭಿವೃದ್ಧಿಗೆ ತಲಾ 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳಡಿ ಕೆರೆ ಹೂಳೆತ್ತುವುದು, ಏರಿ ಮೇಲಿನ ಗಿಡಗಂಟೆ ತೆರವು, ತೂಬುಗಳ ದುರಸ್ತಿ ಹಾಗೂ ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸುವ ಕೆಲಸ ಕೈಗೊಳ್ಳಲಾಗುವುದು. ಕೆರೆಗಳ ಅಭಿವೃದ್ಧಿಯಿಂದ ರೈತರ ನೀರಾವರಿ ಕೃಷಿಗೆ ಉತ್ತೇಜನ ಸಿಗುವುದರ ಜೊತೆಗೆ ಅಂತರ್ಜಲ ಮಟ್ಟವೂ ಹೆಚ್ಚಲಿದೆ. ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯೂ ನಿವಾರಣೆಯಾಗಲಿದೆ ಎಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK